ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಅಕ್ಟೋಬರ್-೨೦೧೬ ಸಂಚಿಕೆ - ೩

ಕಾಶ್ಮೀರ ಮತ್ತು ಗಾಂಧೀ

*

ಕಾವೇರಿ ಗಲಭೆಯ ಸುತ್ತಮುತ್ತ ಒಂದು ಪ್ರಶ್ನೋತ್ತರ

*

ಗಾಂಧೀ ನನಗೇನು ಮಾಡಿದರು?

*

ಗಾಂಧೀಯೊಂದಿಗೆ ಭೇಟಿ: ಎರಡು ಅನುಭವ

ಜನಪದ ವಿಚಾರದಲ್ಲಿ

ಅಕ್ಟೋಬರ್– ೨೦೧೬

೧. ಕಾಶ್ಮೀರ ಮತ್ತು ಗಾಂಧೀ **ಪುಟ : ೩–೫**

ಭಾರತದ ಅವಿಭಾಜ್ಯ ಅಂಗವೆಂದು ಪರಿಗಣಿಸಲ್ಪಟ್ಟಿರುವ ಕಾಶ್ಮೀರ್ ರಾಜ್ಯದಲ್ಲಿ ಕಳೆದ ನಾಲ್ಕು ತಿಂಗಳಿಂದ ಹಿಂಸಾಚಾರ ನಡೆಯುತ್ತಿದೆ. ಕಾಶ್ಮೀರ್ ಸಮಸ್ಯೆ ಪರಿಹಾರವಾಗದೆ ೭೦ ವರ್ಷಗಳಾದವು. ಇದುವರೆಗೆ ಪರಿಹಾರಕ್ಕಾಗಿ ಹಿಂಸೆಯನ್ನೇ ಹೆಚ್ಚಾಗಿ ಅವಲಂಬಿಸಲಾಗಿದೆ. ಆದ್ದರಿಂದ ಆ ಸಮಸ್ಯೆಯ ಪರಿಹಾರಕ್ಕೆ ಗಾಂಧೀ ಮಾರ್ಗವೇ ಶ್ರೇಷ್ಠ ಉಪಾಯವೆಂದು ಈ ಲೇಖನ ಸೂಚಿಸುತ್ತದೆ.

– ಸುರೇಂದ್ರ ಕೌಲಗಿ

೨. ಕಾವೇರಿ ಗಲಭೆಯ ಸುತ್ತಮುತ್ತ ಒಂದು ಪ್ರಶ್ನೋತ್ತರ **ಪುಟ : ೬–೧೪**

ನದಿ ನೀರಿನ ಹಂಚಿಕೆಯ ವಿಚಾರ ರಾಷ್ಟ್ರೀಯ ವಿಚಾರ. ಆ ಸಂಬಂಧ ಅತಿರೇಕದ ಪ್ರತಿಭಟನೆಗಳು, ಗಲಭೆಗಳು ಆಗುತ್ತವೆ. ಕಾವೇರಿ ಸಮಸ್ಯೆಯನ್ನು ಮಾದರಿಯನ್ನಾಗಿರಿಸಿಕೊಂಡು ವಿಷಯದ ವಿಶ್ಲೇಷಣೆಯಲ್ಲಿದೆ.

– ಡಿ ಎಸ್ ನಾಗಭೂಷಣ

೩. ಗಾಂಧೀಜಿ ನನಗೇನು ಮಾಡಿದರು? **ಪುಟ : ೧೫–೨೨**

ಗಾಂಧೀಜಿಯವರು ನನ್ನನ್ನು ಸ್ವಲ್ಪ ಕಡಿಮೆಕೆಟ್ಟವನಾಗಿ, ಸ್ವಲ್ಪ ಹೆಚ್ಚು ಒಳ್ಳೆಯವನಾಗಿ ಹೇಗೆ ಮಾಡಿದರೆಂಬ ಅನುಭವದ ಮಾತುಗಳು ಈ ಲೇಖನದಲ್ಲಿದೆ.

– ಒಬ್ಬ ಸಾಮಾನ್ಯ

೪. ಗಾಂಧಿಯೊಂದಿಗೆ ಮೊದಲ ಮತ್ತು ಕೊನೆಯ ಭೇಟಿ **ಪುಟ : ೨೩–೩೨**

ಓಶೋ ಎಂದು ಪ್ರಸಿದ್ಧಿಯಾದ ಚಿಂತಕನ ಸಂಬಂಧ ಗಾಂಧಿಯೊಂದಿಗೆ ಬಂದ ಸಂದರ್ಭದ ಅವಲೋಕನ ಮತ್ತು ವಿಮರ್ಶನ ಈ ಲೇಖನದಲ್ಲಿದೆ.

– ಓಶೋ

೫ ಕರ್ಮಯೋಗದ ಮಹಿಮೆ **ಪುಟ : ೩೩–೩೬**

ಜ್ಞಾನಯೋಗ, ಭಕ್ತಿಯೋಗ ಮುಂತಾದ ಯೋಗಗಳಲ್ಲಿ ಕರ್ಮಯೋಗವೂ ಒಂದು ಅದನ್ನು ಕುರಿತ ವಿನೋಬಾ ಚಿಂತನೆ ಇಲ್ಲಿದೆ.

– ವಿನೋಬಾ

೬. ಜನಪದ ಸೇವಾ ಟ್ರಸ್ಟ್ ಸಮಾಚಾರ **ಪುಟ : ೩೭–೩೯**

೭. ಸರ್ವೋದಯ ಆಂದೋಲನ ಮುನ್ನಡೆ **ಪುಟ : ೪೦**

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೧೬
ಸಂಪುಟ - ೧೭
ಸಂಚಿಕೆ - ೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಗಾಂಧೀ ಮೇಲಣಪ್ರೀತಿ

ಮಹಾತ್ಮರೆಂದಲ್ಲ.
ಅವರು ಮನುಷ್ಯರಾಗಿದ್ದು
ಗುಬ್ಬಚ್ಚಿಯಾಗಿ ಗೂಡು ಕಟ್ಟಿದ್ದಕ್ಕೆ
ನಾನು ಪ್ರೀತಿಸುತ್ತೇನೆ:
ಇಡೀ ದೇಹ
ಮುಪ್ಪು ಮುಪ್ಪಾಗಿದ್ದರೂ
ಉಪ್ಪಿನ ಮಹಾಸಾಗರದಿಂದ
ಮರಳು ದಂಡೆಯನ್ನು ದಾಟಿದ
ಒಂದು ಕೋಲಿನ ಗುರುತುಗಳಿಗಾಗಿ
ನಾನು ಪ್ರೀತಿಸಿದ್ದು
'ಬಾಪೂಜಿ' ಎಂದು
ಬಾಯಿತುಂಬಿಕೊಂಡಿದ್ದು
ಗುಣಗಾನಕ್ಕಲ್ಲ:
ಗೌರವಕ್ಕಾಗಿ.
ಆಫ್ರಿಕಾದಲ್ಲಿ ಇಂಡಿಯಾದಲ್ಲಿ
ಮಾಂಸ ಖಂಡ ರಕ್ತನಾಳಗಳನ್ನು
ಒಂದಾಗಿಸಿ ಉಸಿರಾಡಿದ್ದಕ್ಕೆ
ಮೋಹನದಾಸ ಕರಮಂಚಂದ
ಗಾಂಧೀಯನ್ನು ಪ್ರೀತಿಸಿದ್ದು ನಾಡಿನ
ಸತ್ಯಹರಿಶ್ಚಂದ್ರ ನೋಡಿ ಅತ್ತಿದ್ದಕ್ಕೆ.

ಸುಬ್ಬು ಹೊಲೆಯಾರ್

ಚಿಂತನೆಗೊಂದು ಸಂಗತಿ

ತಾಂತ್ರಿಕ ಹುಡುಗಿ

ಕೈಗಾರೀಕರಣದಿಂದಾಗಿ ಮಾನವಪರಿಸರವಿಜ್ಞಾನ ಎಷ್ಟೊಂದು ಬದಲಾವಣೆಯಾಗುತ್ತಿರುವುದೆಂಬುದಕ್ಕೆ ಇತ್ತೀಚೆಗೆ ಭೇಟಿಯಾದ ನಮ್ಮ ಊರು ಹುಡುಗಿಯೊಬ್ಬಳು ಉದಾಹರಣೆಯಾಗಿದ್ದಾಳೆ. ಗ್ರಾಮ ಜೀವನವಿರುವ ಊರಿನಲ್ಲಿಯೇ ಹುಟ್ಟಿ, ಪರಿಸರ ಭಾಷೆ ಕನ್ನಡ ಮಾಧ್ಯಮದಲ್ಲಿಯೇ ಓದಿ, ಸಾಫ್ಟ್‌ವೇರ್ ಇಂಜಿನಿಯರಿಂಗ್ ಕಲಿತು ಬೆಂಗಳೂರಿನಲ್ಲಿ ಒಳ್ಳೆಯ ಸಂಬಳದ ಕೆಲಸದಲ್ಲಿದ್ದಾಳೆ. ಅವಳು ಕೆಲಸ ಮಾಡುವ ಕಂಪನಿಯಲ್ಲಿ ಉತ್ತರ ಭಾರತೀಯರು ಹೆಚ್ಚಾಗಿದ್ದಾರೆ. ಅವಳು ಪೇಯಿಂಗ್ ಗೆಸ್ಟಾಗಿ ಒಂದು ಕಡೆ ವಾಸವಾಗಿದ್ದಾಳೆ. ಅವಳು ಊರಿಗೆ ಬಂದಾಗ ಅವಳು ಮಾಡುವ ಕೆಲಸ ಮತ್ತು ಅವಳ ಪರಿಸರ ಬಗ್ಗೆ ಮಾತನಾಡಿದೆ. ಅವಳು ಕೊಡುತ್ತಿದ್ದ ವಿವರಣೆ ಎಲ್ಲ ಇಂಗ್ಲೀಷ್ ಶಬ್ದ ಮಿಶ್ರಿತ ಕನ್ನಡವಾಗಿತ್ತು. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ತುಂಬ ಇತ್ತು. ಒಂದು ಮಾತನ್ನೂ ಶುದ್ಧ ಕನ್ನಡದಲ್ಲಿ ಅವಳಿಗೆ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಮಾತನಾಡುವಾಗ ಹಾವಭಾವ, ನಟನೆಯಿರುತ್ತಿತ್ತು. ಕಿವಿಗಳಲ್ಲಿ ರೂಪಾಯಿ ನಾಣ್ಯ ಆಕಾರದ ಎರಡು ಚಿತ್ರಿತ ಬಿಲ್ಲೆಗಳು ಕಿವಿಗಳಲ್ಲಿ ನೇತಾಡುತ್ತಿದ್ದವು. ಜೀನ್ಸ್ ಪ್ಯಾಂಟ್ ಧರಿಸಿದ್ದು ಮುಖ್ಯ ವಸ್ತ್ರವಾಗಿತ್ತು. ಅದು ಕೂಡ ಬಿಗಿಯಾದ ಪ್ಯಾಂಟ್. ಹಣೆಯ ಮೇಲೆ ಕುಂಕುಮ ಬೊಟ್ಟು ಇಲ್ಲ. ಕೈಯಲ್ಲಿ ಬಳೆ ಇಲ್ಲ, ಅವಳು ಕೆಲಸ ಮಾಡುತ್ತಿರುವ ಕಂಪನಿ ರಕ್ಷಣಾ ಇಲಾಖೆಗೆ ಬೇಕಾಗಿರುವ ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ್ದಾಗಿದೆ. ಅವಳ ಮಾತಿನಲ್ಲಿ ಬರುತ್ತಿದ್ದುದು ಗನ್, ಬುಲೆಟ್, ವಾರ್ ಇತ್ಯಾದಿ ಶಬ್ದಗಳೇ. ಅವಳಿಗೆ ತನ್ನ ದೇಶದ ಇತರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ವಿಷಯಗಳ ಬಗ್ಗೆ ತಿಳುವಳಿಕೆ ಇರುವಂತಾಗಲೀ ಅಥವಾ ಆಸಕ್ತಿ ಇರುವಂತಾಗಲೀ ಇದ್ದಂತೆ ಅನಿಸಲಿಲ್ಲ. ಹಳ್ಳಿಯ ಸಾಮಾನ್ಯ ಹುಡುಗಿಯೊಬ್ಬಳನ್ನು ತಾಂತ್ರಿಕಶಿಕ್ಷಣ ಮತ್ತು ಯಾಂತ್ರಿಕಜೀವನ ಮಾನವ ಪರಿಸರವನ್ನು ಎಷ್ಟೊಂದು ಹಾಳುಮಾಡಿದೆ ಎಂಬುದಕ್ಕೆ ಈ ಮುಗ್ಧ ಹುಡುಗಿ ಉದಾಹರಣೆಯಾಗಿದ್ದಾಳೆ. ತಾನು ಮಾಡುತ್ತಿರುವ ಕೆಲಸವೇನು, ಅದರಿಂದ ಸಮಾಜಕ್ಕೆ ಒಳ್ಳೆಯದಾಗುತ್ತಿದೆಯೆ ಅಥವಾ ನಷ್ಟವಾಗುತ್ತಿದೆಯೆ ಎಂಬುದರ ಪರಿವೆಯೇ ಇಲ್ಲದೆ ಕೇವಲ ಕೈತುಂಬ ಬರುವ ಸಂಬಳಕ್ಕೆ ಮೋಹಿತರಾಗಿ ತಮ್ಮ ಜೀವನವನ್ನು ಯಾಂತ್ರಿಕ ಗೊಳಿಸುತ್ತಿರುವ ಯುವಕ-ಯುವತಿಯರನ್ನು ನೋಡಿದಾಗ ಜಗತ್ತಿಗೆ, ಮತ್ತು ಮುಖ್ಯವಾಗಿ ದೇಶಕ್ಕೆ, ಅವರಿಗೇ ಸ್ವತಃ ಸುಖಕರ ಭವಿಷ್ಯವಿದೆಯೇ ಎಂಬುದು ಚಿಂತನೆಗೊಂದು ಸಂಗತಿ. ●

ಕಾಶ್ಮೀರ ಮತ್ತು ಗಾಂಧೀ

– ಸುರೇಂದ್ರ ಕೌಲಗಿ

ಜಾತ್ಯಾತೀತ ಭಾರತ ಮತ್ತು ಧರ್ಮಾಧಾರಿತ ಪಾಕಿಸ್ತಾನ ದೇಶಗಳ ಶನಿಸಂತಾನ ಕಾಶ್ಮೀರ. ಕಳೆದ ಎಪ್ಪತ್ತು ವರ್ಷಗಳಿಂದ ಈ ಸಂತಾನ ಎರಡೂ ದೇಶಗಳಿಗೆ ನೆಮ್ಮದಿ ಕೊಟ್ಟಿಲ್ಲ. ಏಳು ದಶಕಗಳಾದರೂ ಕಾಶ್ಮೀರ ಸಮಸ್ಯೆ ಬಗೆಹರಿಯಬಹುದೆಂಬ ಆಸೆ ಕಾಣುತ್ತಿಲ್ಲ. ಇನ್ನೂ ಹೆಚ್ಚು ಗೋಜಲಾಗುತ್ತಾ ಹೋಗುವ ಕಾರಣಗಳೇ ಉಂಟಾಗುತ್ತಿವೆ.

ಭಾರತದಲ್ಲಿಯಂತೆ ಪಾಕಿಸ್ತಾನದಲ್ಲೂ ಬಡತನ, ನಿರುದ್ಯೋಗ, ಮಹಿಳಾ ಸಮಸ್ಯೆ, ಶಿಕ್ಷಣ ಸಮಸ್ಯೆ, ಬರಗಾಲ ಮುಂತಾದವುಗಳಿವೆ. ಕಾಶ್ಮೀರ ಸಮಸ್ಯೆಯ ಕಾರಣದಿಂದಾಗಿ ಆ ದೇಶದ ಬಜೆಟ್ಟಿನ ಸಿಂಹಪಾಲು ರಕ್ಷಣಾ ಇಲಾಖೆಗೇ ಹೋಗುತ್ತಿದೆ. ಆದ್ದರಿಂದ ಅಲ್ಲಿಯ ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ವಿತ್ತೀಯ ಕೊರತೆ ಇದೆ. ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಗಮನ ಕೊಡಬೇಕಾಗಿದ್ದರೂ ಸಹ ಪಾಕಿಸ್ತಾನ ಸರ್ಕಾರ ಕಾಶ್ಮೀರ ಸಮಸ್ಯೆಯನ್ನೇ ದೊಡ್ಡದನ್ನಾಗಿ ಮಾಡಿಕೊಂಡು ಕುಳಿತಿದೆ. ತನ್ನ ವಿದೇಶ ನೀತಿಯಲ್ಲಿಯೂ ಕಾಶ್ಮೀರ್ ಸಮಸ್ಯೆಯನ್ನೇ ಪ್ರಧಾನವಾಗಿಟ್ಟುಕೊಂಡಿದೆ.

ಭಾರತದ ಪರಿಸ್ಥಿತಿಯೂ ಭಿನ್ನವಾಗಿಲ್ಲ. ಮೋದಿ ಸರ್ಕಾರ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಅದರ ಶಕ್ತಿ, ಸಮಯ ಮತ್ತು ಹಣ ಕಾಶ್ಮೀರ ಸಮಸ್ಯೆಯ ಬಗ್ಗೆಯೇ ವ್ಯಯವಾಗುತ್ತಿದೆ. ದೇಶದಲ್ಲಿಯ ಆಂತರಿಕ ಸಮಸ್ಯೆಗಳ ಪರಿಹಾರದ ವಿಷಯಕ್ಕಿಂತ ಕಾಶ್ಮೀರ ಸಮಸ್ಯೆಯೇ ಭಾರತಕ್ಕೆ ದೊಡ್ಡದಾಗಿದೆ. ಒಂದರ್ಥದಲ್ಲಿ ಎಪ್ಪತ್ತು ವರ್ಷದ ಕಾಶ್ಮೀರ ಸಮಸ್ಯೆಯ ತಿಕ್ಕಾಟದಲ್ಲಿ ಎರಡು ದೇಶಗಳೂ ದಣಿದಿವೆ. ಆದರೂ ರಾಜಕೀಯ ಕಾರಣಗಳಿಂದಾಗಿ ಕಾಶ್ಮೀರ ಸಮಸ್ಯೆಯನ್ನು ಅವು ಜೀವಂತವಾಗಿಟ್ಟುಕೊಂಡಿವೆ; ಪ್ರತಿಷ್ಠಿತ ಪ್ರಶ್ನೆಯನ್ನಾಗಿ ಮಾಡಿಕೊಂಡಿವೆ. ಈ ವಿಷಯದಲ್ಲಿ ಸೋಲಲೇ ಬಾರದೆಂಬ ದೃಢನಿಶ್ಚಯವನ್ನು ಎರಡೂ ದೇಶಗಳ ಸರ್ಕಾರ ಮಾಡಿರುವಂತಿದೆ.

ಬಂದೂಕಿನ ಬಲದಿಂದ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಬಹುದೆಂದು ಭಾರತ ಭಾವಿಸಿದ್ದರೆ, ಪಾಕಿಸ್ತಾನವು ಕಾಶ್ಮೀರದಲ್ಲಿ ಭಯೋತ್ಪಾದಕರನ್ನೂ ದಂಗೆಕೋರರನ್ನೂ ಕಳುಹಿಸಿ ಮತ್ತು ಅಲ್ಲಿಯ ಯುವಕರನ್ನು ಭಾರತದ ವಿರುದ್ಧ ಎತ್ತಿಕಟ್ಟುವುದರ ಮೂಲಕ ಕಾಶ್ಮೀರ ಸಮಸ್ಯೆ ಜ್ವಲಂತವಾಗಿರುವಂತೆ ಮಾಡಿ

ಸಮಸ್ಯೆಯನ್ನು ಬಗೆಹರಿಸಬಹುದೆಂದು ತಿಳಿದುಕೊಂಡಿದೆ. ಈ ಎಲ್ಲ ಕಾರಣಗಳಿಂದ ಎರಡೂ ದೇಶಗಳ ಮಧ್ಯೆ ದ್ವೇಷದ ಹೊಳೆ ಹರಿಯುತ್ತಿದೆ. ಇಂಗ್ಲೀಷ್ ದಿನಪತ್ರಿಕೆಯೊಂದರಲ್ಲಿ ಓರ್ವ ಮಹಾಶಯ ಹೀಗೆಂದು ಪತ್ರ ಬರೆದಿದ್ದಾರೆ, "ರಾಜತಾಂತ್ರಿಕ ಉಪಾಯಗಳು ವಿಫಲವಾದರೆ ಕಾಶ್ಮೀರ ಸಮಸ್ಯೆಯನ್ನು ಸೈನ್ಯ ಬಲದಿಂದ ಬಗೆಹರಿಸಬೇಕು ಮತ್ತು ಅದನ್ನು ಶೀಘ್ರ ಮತ್ತು ಪರಿಣಾಮಕಾರಿಯಾಗಿ ಮಾಡಬೇಕು. ವಾಕ್ ಸಮರವನ್ನು ನಿಲ್ಲಿಸಿ ಪಾಕಿಸ್ತಾನದೊಂದಿಗೆ ನಿಜವಾದ ಯುದ್ಧಕ್ಕೆ ಸಿದ್ದರಾಗಬೇಕು."

ಎರಡೂ ದೇಶಗಳು ಆಂತರಿಕವಾಗಿ ಯುದ್ಧದ ಸಿದ್ಧತೆ ಮಾಡಿಕೊಳ್ಳುತ್ತ ಇರಬಹುದೆಂಬ ಗುಮಾನಿ ಬಲವಾಗುತ್ತಿದೆ. ಭಾರತ ಮತ್ತು ಪಾಕಿಸ್ತಾನ ಹೊಂದಿರುವ ಅಂತರಾಷ್ಟ್ರೀಯ ರಕ್ಷಣಾ ಮೈತ್ರಿ ಸಂಬಂಧಗಳನ್ನು ಗಮನಿಸಿದರೆ ಕಾಶ್ಮೀರ ಸಮಸ್ಯೆಯಿಂದಾಗಿ ಯುದ್ಧ ಉಂಟಾದಲ್ಲಿ ಅದು ಮೂರನೆ ಜಾಗತಿಕ ಮಹಾಯುದ್ಧದಲ್ಲಿ ಪರಿವರ್ತಿತಗೊಳ್ಳುವ ಭೀತಿ ಇದೆ. ಒಂದುವೇಳೆ ಅಂಥ ಯದ್ಧ ಸಂಭವಿಸಿದಲ್ಲಿ ನೂರಾರು ಅಣುಬಾಂಬುಗಳು ಭೂಮಂಡಲದ ಮೇಲೆಲ್ಲ ಬೀಳುವವು. ಆಗ ಭೂಮಂಡಲವೇ ಸುಟ್ಟು ಬೂದಿಯಾಗಬಹುದು. ಅಂಥ ಕಾಲದಲ್ಲಿ ಬೂದಿಯಿಂದ ಹುಟ್ಟಿಬರುವ ಫಿನಿಕ್ಸ್ ಹಕ್ಕಿಯೂ ಜೀವಂತವಾಗಿರುವುದಿಲ್ಲ.

ಅಂಥ ಮಹಾದುರಂತವನ್ನು ತಪ್ಪಿಸಲು ಎರಡೂ ದೇಶಗಳು ಗಾಂಧೀಜಿಯವರು ಬೋಧಿಸಿದ ಸತ್ಯ ಮತ್ತು ಅಹಿಂಸೆಯ ವಿಚಾರಗಳ ಮೂಲಕ ಕಾಶ್ಮೀರ ಸಮಸ್ಯೆಯನ್ನು ಕಾಲ ಮಿಂಚುವ ಮೊದಲೇ ಬಗೆಹರಿಸಿಕೊಳ್ಳಲು ಇದು ಸಕಾಲ. ಮಹಾತ್ಮ ಗಾಂಧೀಜಿಯ ವ್ಯಕ್ತಿತ್ವ ಕಾರ್ಯ, ಮತ್ತು ವಿಚಾರದ ಪರಿಚಯವಿರುವ ಬಹಳಷ್ಟು ಸಾಮಾನ್ಯಜನರು ಮತ್ತು ವಿಚಾರವಂತರು ಪಾಕಿಸ್ತಾನದಲ್ಲಿದ್ದಾರೆ. ಸತ್ಯ ಮತ್ತು ಅಹಿಂಸೆಯಲ್ಲಿ ನಂಬಿಕೆ ಇಟ್ಟಿರುವ ಎರಡೂ ದೇಶಗಳ ನಾಗರೀಕರಲ್ಲಿ ಪರಸ್ಪರ ವಿಚಾರ ವಿನಿಮಯ ನಡೆಯಬೇಕು; ವಿಚಾರ ಗೋಷ್ಠಿಗಳು, ಸಮ್ಮೇಳನಗಳೂ ನಡೆಯಬೇಕು. ನಾಗರೀಕರ ಮಧ್ಯೆ ಸೌಹಾರ್ದತೆಯನ್ನು ಉಂಟುಮಾಡುವ ದಿಸೆಯಲ್ಲಿ ಮಾಧ್ಯಮ ಮಹತ್ವದ ಪಾತ್ರ ವಹಿಸಬೇಕು. ಮಾಧ್ಯಮಗಳು ಎರಡೂ ದೇಶದಲ್ಲಿಯ ಶಾಂತಿಪ್ರಿಯ ಮತ್ತು ಅಹಿಂಸಾಪ್ರಿಯ ನಾಗರೀಕ ಸಮಾಜದ ಪ್ರಜಾಶಕ್ತಿ ಪ್ರಬಲಗೊಳಿಸಬೇಕು. ಆಗ ಎರಡೂ ದೇಶಗಳ ಸರ್ಕಾರಗಳ ಬಂದೂಕು ನೀತಿಯನ್ನು ಬದಲಾಯಿಸಲು ಸಾಧ್ಯವಾಗುತ್ತದೆ. ಅಂಥವರನ್ನು ಒಗ್ಗೂಡಿಸುವ ಪ್ರಯತ್ನವನ್ನು ಸರ್ಕಾರವೂ ಮಾಡಬೇಕಿದೆ. ಯಾವ ರೀತಿ ಕಾಶ್ಮೀರಕ್ಕೆ ಸರ್ವ ಪಕ್ಷಗಳ ನಿಯೋಗ ಹೋಗಿ

ಮಾತುಕತೆಯ ಮೂಲಕ ಸೌಹಾರ್ದತೆಯ ವಾತಾವರಣ ಮೂಡಿಸಲು ಪ್ರಯತ್ನಿಸಿತೊ ಅದೇ ರೀತಿ ಶಾಂತಿ ಬಯಸುವ ಪಕ್ಷಾತೀತ ನಾಗರಿಕ ನಿಯೋಗವೊಂದು ಕಾಶ್ಮೀರಕ್ಕೆ ಹೋಗಿ ಅಲ್ಲಿಯ ನಾಗರಿಕರೊಂದಿಗೆ ಸಂವಾದ ನಡೆಯುವಂತೆ ಮಾಡಬೇಕು.

ಕಾಶ್ಮೀರ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಈಗ ಅತ್ಯಗತ್ಯವಾಗಿ ಬೇಕಿರುವುದು ಎರಡೂ ದೇಶಗಳ ಮಧ್ಯೆ ಸ್ನೇಹ ಮತ್ತು ನಂಬಿಕೆ. ವೈಜ್ಞಾನಿಕ ಯುಗದಲ್ಲಿ ಕಾದಾಟಕ್ಕೆ ಅವಕಾಶವಿಲ್ಲ. ಈ ಕಾರಣದಿಂದಾಗಿಯೇ ಗಾಂಧೀಜಿಯವರು ಭಾರತ ಇಬ್ಭಾಗವಾಗುವುದೆಂದರೆ ಅದೊಂದು ದುರಂತವೆಂದೂ ಹಾಗೂ ಒಂದಾಗಿ ಬದುಕುತ್ತಿರುವ ಹಿಂದೂ ಮತ್ತು ಮುಸ್ಲಿಂರನ್ನು ಬೇರ್ಪಡಿಸುವುದೆಂದರೆ ದೈವನಿಂದನೆ ಮಾಡಿದಂತೆ ಮತ್ತು ಎರಡೂ ದೇಶಗಳು ಇರುವವರೆಗೂ ರಾಜಕೀಯ ಸಮಸ್ಯೆಗಳನ್ನು ಎದುರಿಸುತ್ತಲೇ ಇರಬೇಕಾಗುತ್ತದೆ ಎಂದೂ ಹೇಳಿದ್ದರು. ಅವರ ಈ ಮಾತು ಅವುಗಳಿಗೆ ಈಗ ಅನುಭವವಾಗುತ್ತಿದೆ. ಗಾಂಧೀಜಿಯವರ ಮಾತು ಮೀರಿದ್ದರಿಂದಲೇ ಕಾಶ್ಮೀರ ಸಮಸ್ಯೆ ಉಂಟಾಗಿದೆ. ಪರಸ್ಪರ ದ್ವೇಷದ ಪರಿಣಾಮವಾಗಿ ಎರಡೂ ದೇಶಗಳಲ್ಲಿಯ ಮೂರನೇ ತಲೆಮಾರಿನ ಯುವಕರು ದ್ವೇಷವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಗಾಂಧೀಜಿಯವರು ಪಾಕಿಸ್ತಾನಕ್ಕೆ ಕೇಡು ಬಯಸಲಿಲ್ಲ. ಭಾರತ ದೇಶ ಒಂದಾಗಿಯೇ ಉಳಿಯಬೇಕೆಂದು ಅವರು ಬಯಸಿದ್ದರು. ಪ್ರಧಾನಿಯಾಗಿ ಅಥವಾ ರಕ್ಷಣಾ ಮಂತ್ರಿಯಾಗಿ ಮೊಹಮ್ಮದ್‌ಅಲಿ ಜಿನ್ನಾ ಆಗಲೆಂದು ಸೂಚಿಸಿದ್ದರು ಮತ್ತು ಆ ದೇಶಕ್ಕೆ ಸಲ್ಲಬೇಕಾದ ೫೫ ಕೋಟಿರೂಪಾಯಿಗಳನ್ನು ಸಹ ಕೊಡಿಸಿದರು. ದೇಶ ಇಬ್ಭಾಗವಾದ ಕೂಡಲೆ ಕಲ್ಕತ್ತ, ದಿಲ್ಲಿ, ನೌಖಾಲಿಯಂಥ ಪ್ರದೇಶಗಳಲ್ಲಿ ಉಂಟಾಗಿದ್ದ ಕೋಮು ಗಲಭೆಯನ್ನು ನಿಯಂತ್ರಿಸಲು ಎಪ್ಪತ್ತೇಳನೆ ವಯಸ್ಸಿನಲ್ಲಿ ತಮ್ಮ ಜೀವನದ ಹಂಗು ತೊರೆದು ಪಾದಯಾತ್ರೆ ಮಾಡಿದರು; ಉಪವಾಸ ಮಾಡಿದರು. ಎರಡು ಕೋಮುಗಳಲ್ಲಿ ಸೌಹಾರ್ದತೆ ಉಂಟುಮಾಡಲು ಪ್ರಯತ್ನಿಸಿದರು. ಗಾಂಧೀಜಿಯವರ ನೌಖಾಲಿಯಾತ್ರೆ ಹಿಂದೂ-ಮುಸ್ಲಿಂ ಸೌಹಾರ್ದತೆಯ ಅಗತ್ಯವನ್ನು ಸೂಚಿಸುವ ಐತಿಹಾಸಿಕ ದಾಖಲೆಯಾಗಿದೆ. ಈಗ ಅಂಥದೇ ಒಂದು ಐತಿಹಾಸಿಕ ಕೆಲಸ ಆಗಬೇಕಿದೆ. ಪಾಕಿಸ್ತಾನ ಮತ್ತು ಭಾರತದಲ್ಲಿರುವ ಶಾಂತಿ ಬಯಸುವ ಜನರು ಒಂದುಗೂಡಿ ಪ್ರಯತ್ನಿಸಿದಲ್ಲಿ ಗಾಂಧೀಜಿಯವರು ಪ್ರತಿಪಾದಿಸಿದ್ದ ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಕೊಳ್ಳುವುದು ಕಷ್ಟವಾಗಲಾರದು; ಪರಿಹಾರದ ಹಲವಾರು ಬಾಗಿಲಗಳು ಖಂಡಿತ ತೆರೆಯುವವು. ●

ಕಾವೇರಿ ಗಲಭೆಯ ಸುತ್ತಮುತ್ತ ಒಂದು ಪ್ರಶ್ನೋತ್ತರ

–ಡಿ.ಎಸ್. ನಾಗಭೂಷಣ

೧. ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ನಿಜವಾಗಿಯೂ ಅನ್ಯಾಯವಾಗಿದೆಯೆ?

ಇಟ್ಟ ಬೇಡಿಕೆ ಅಥವಾ ಇದ್ದ ನಿರೀಕ್ಷೆಗಿಂತ ಕಡಿಮೆ ಪಡೆಯುವಂತಾದ ಪರಿಸ್ಥಿತಿಯಲ್ಲಿ ಯಾರಾದರೂ ಅನ್ಯಾಯವಾಗಿದೆ ಎಂದು ಹೇಳುವುದು ಸಹಜ. ಆ ಅರ್ಥದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬ ಕೂಗನ್ನು ಗ್ರಹಿಸಬೇಕಿದೆ. ಏಕೆಂದರೆ ಈ ವಿವಾದದ ಇನ್ನೊಂದು ಪಕ್ಷವಾದ ತಮಿಳ್ನಾಡು ಕೂಡ ಹಾಗೇ ಹೇಳುತ್ತಿದೆ ಎಂಬುದನ್ನೂ ಗಮನಿಸಿದಾಗ ಈ ನ್ಯಾಯ–ಅನ್ಯಾಯಗಳ ಮಾತಿಗೆ ಒಂದು ಪರಿಪ್ರೇಕ್ಷ್ಯ ಒದಗುತ್ತದೆ.

ನ್ಯಾಯಕ್ಕಾಗಿ ನಾವು ಹೋದ ವೇದಿಕೆ ಸರ್ವೋಚ್ಚ ನ್ಯಾಯಾಲಯವೆಂಬ ಒಂದು ಸಾಂವಿಧಾನಿಕ ಅಧಿಕಾರ ಮತ್ತು ಜವಾಬ್ದಾರಿ ಇರುವ ನಾವೇ ರಚಿಸಿಕೊಂಡಿರುವ ರಾಷ್ಟ್ರದ ಅತ್ಯುನ್ನತ ನ್ಯಾಯಾಧಿಕರಣ. ಅದು ಕೊಟ್ಟ ತೀರ್ಪನ್ನು ಅನ್ಯಾಯ ಎಂದು ಸಾರಾಸಗಟಾಗಿ ಹೇಳುವುದು ನಮ್ಮಲ್ಲಿ ನಾವೇ ನಂಬಿಕೆ ಕಳೆದುಕೊಂಡಂತೆ. ಬದಲಿಗೆ, ತೀರ್ಪು ಅನ್ಯಾಯದಿಂದ ಕೂಡಿದ್ದರೆ, ಅದು ಹಾಗಾಗಲು ಕಾರಣವೇನೆಂದು ನಾವು ಯೋಚಿಸಬೇಕು. ಏಕೆಂದರೆ, ಆಧುನಿಕ ನ್ಯಾಯ ಪದ್ಧತಿಯಲ್ಲಿ ನ್ಯಾಯ ಎನ್ನುವುದು ಸಂಬಂಧಪಟ್ಟ ಪಕ್ಷಗಳು ಮಂಡಿಸುವ ಅಂಕಿ–ಅಂಶ, ಸಾಕ್ಷ್ಯ ಮತ್ತು ವಾದ ಸರಣಿಯ ಜಾಣ್ಮೆಯನ್ನು ಅವಲಂಬಿಸಿ ತೀರ್ಪಿನ ರೂಪದಲ್ಲಿ ವ್ಯಕ್ತವಾಗುತ್ತದೆ.

೨. ಕರ್ನಾಟಕಕ್ಕೆ ಕಾವೇರಿ ನದಿ ನೀರು ಹಂಚಿಕೆ ನ್ಯಾಯಾಧಿಕರಣದಿಂದ ಮೊದಲಿಂದಲೂ ಅನ್ಯಾಯವೇ ಆಗುತ್ತಿದೆ ಎಂಬ ಮಾತಿದೆಯಲ್ಲಾ?

ಹೌದು, ಇದೆ. ಇದರ ಮೂಲವನ್ನು ನಾವು ಕೃಷ್ಣರಾಜ ಸಾಗರ ಅಣೆಕಟ್ಟನ್ನು ನಿರ್ಮಿಸುವ ಮೊದಲೇ ೧೯೨೪ರಲ್ಲಿ ಬ್ರಿಟಿಷ್ ಸರ್ಕಾರ ರೂಪಿಸಿದ ಒಪ್ಪಂದಕ್ಕೆ ಹಳೇ ಮೈಸೂರು ಸಂಸ್ಥಾನ ಸಹಿ ಹಾಕಿದ ಸಂದರ್ಭದಲ್ಲಿ ಗುರುತಿಸಬಹುದಾಗಿದೆ. ಆಗ ಮದ್ರಾಸ್ ಪ್ರಾಂತ್ಯ ಮತ್ತು ಹಳೇ ಮೈಸೂರು ಸಂಸ್ಥಾನದ ಬೆಳೆ ಪದ್ಧತಿ ಮತ್ತು ವ್ಯಾಪ್ತಿ ಹಾಗೂ ನೀರಾವರಿ ಯೋಜನೆಗಳ ಪರಿಸ್ಥಿತಿಯನ್ನು ಅವಲಂಬಿಸಿ ಈ ಒಪ್ಪಂದವನ್ನು ರೂಪಿಸಲಾಗಿತ್ತು. ಜೊತೆಗೆ

ಮದ್ರಾಸ್ ಪ್ರಾಂತ್ಯವನ್ನು ಬ್ರಿಟಿಷ್ ಸರ್ಕಾರ ನೇರವಾಗಿ ಆಳುತ್ತಿತ್ತು ಮತ್ತು ಮೈಸೂರು ಸಂಸ್ಥಾನ ಆ ಸರ್ಕಾರದ ಅಧೀನ ಪ್ರಾಂತ್ಯವಾಗಿತ್ತು ಎಂಬುದನ್ನೂ ನಾವು ಗಮನಿಸಬೇಕು. ಈ ಎರಡೂ ಸಂಗತಿಗಳ ಪರಿಣಾಮಗಳು ಈಗ ಆಧುನಿಕ ಕರ್ನಾಟಕದ ಜನಮನದಲ್ಲಿ ಅನ್ಯಾಯಗಳಂತೆ ಮಾರ್ದನಿಸುತ್ತಿದ್ದಲ್ಲಿ ಆಶ್ಚರ್ಯವೇನಿಲ್ಲ.

೩. ಹೊಸ ಕಾವೇರಿ ಜಲ ಹಂಚಿಕೆ ನ್ಯಾಯಾಧಿಕರಣದಲ್ಲಿ ಈ 'ಅನ್ಯಾಯ'ಗಳನ್ನು ಸರಿಪಡಿಸಬಹುದಿತ್ತಲ್ಲ?

ಹಳೆಯ ಒಪ್ಪಂದ ಜಾರಿಯಾದಾಗ ಆ ಒಪ್ಪಂದವನ್ನು ರೂಪಿಸಿದವರು ಹೇಗೆ ಅಂದಿನ ಕೃಷಿ ಮತ್ತು ನೀರಾವರಿ ಪರಿಸ್ಥಿತಿಯನ್ನು ಎರಡೂ ಪಕ್ಷದವರು ಮಂಡಿಸಿದ ಅಂಕಿ-ಅಂಶಗಳ ಆಧಾರದ ಮೇಲೆ ಪರಿಗಣಿಸಿ ಆ ಒಪ್ಪಂದವನ್ನು ಅಂತಿಮಗೊಳಿಸಿದರೋ ಹಾಗೆ ಈ ಹೊಸ ನ್ಯಾಯಾಧಿಕರಣವೂ ಈಗ ಎರಡು ರಾಜ್ಯಗಳ ವಕೀಲರುಗಳು ಮಂಡಿಸಿದ ಅಂಕಿ-ಅಂಶಗಳನ್ನು ಪರಿಗಣಿಸಿ ತೀರ್ಪು ನೀಡಬಲ್ಲದೇ ಹೊರತು ಯಾವುದೇ ಒಂದು ರಾಜ್ಯ ತನಗೆ ಹಿಂದೆ ಆಗಿದೆ ಎಂದು ಹೇಳಿಕೊಳ್ಳಬಹುದಾದ ಅನ್ಯಾಯಗಳನ್ನು ಪರಿಗಣಿಸಿ ಅಲ್ಲ. ಆದ್ದರಿಂದ ಹೊಸ ನ್ಯಾಯಾಧಿಕರಣದ ತೀರ್ಪಿನಿಂದ ನಮಗೆ ಅನ್ಯಾಯವಾಗಿದೆ ಅನ್ನಿಸಿದ್ದರೆ, ಅದಕ್ಕೆ ಕಾರಣಗಳನ್ನು ಆ ಹಳೆಯ ಒಪ್ಪಂದಿಂದೀಚೆಗೆ ತಮಿಳ್ನಾಡಿಗೆ ಹೋಲಿಸಿದಂತೆ ಕರ್ನಾಟಕವು ತನ್ನ ಕೃಷಿ ಮತ್ತು ನೀರಾವರಿ ಯೋಜನೆಗಳನ್ನು ಎಷ್ಟು ಯಶಸ್ವಿಯಾಗಿ ರೂಪಿಸಿದೆ ಎಂಬುದನ್ನು ತಿಳಿಸುವ ಅಂಕಿ-ಅಂಶಗಳಲ್ಲಿ ಗುರುತಿಸಬೇಕಾಗುತ್ತದೆ.

೪. ಹೊಸ ನ್ಯಾಯಾಧಿಕರಣದ ಅಂತಿಮ ತೀರ್ಪು(ಐತೀರ್ಪು) ಬಂದ ಮೇಲೂ ಆಗಾಗ್ಗೆ ಗಲಾಟೆಗಳು ಆಗಲು ಕಾರಣ?

ಮೊದಲಾಗಿ ಈ ಅಂತಿಮ ತೀರ್ಪಿನ ಬಗ್ಗೆಯೇ ಈ ವಿವಾದದ ಎರಡು ಮುಖ್ಯ ಪಕ್ಷಗಳಾದ ಕರ್ನಾಟಕ ಮತ್ತು ತಮಿಳ್ನಾಡುಗಳಿಗೆ ತೃಪ್ತಿಯಿಲ್ಲ. ಅವುಗಳ ತಕರಾರು ಅರ್ಜಿಗಳ ವಿಚಾರಣೆ ಸರ್ವೋನ್ನತ ನ್ಯಾಯಾಲಯದ ಮುಂದೆ ಮುಂದಿನ ಅಕ್ಟೋಬರ್ ೧೮ರಂದು ವಿಚಾರಣೆಗೆ ಬರಲಿದೆ. ಆದರೆ ಈ ವಿವಾದಿತ ಐತೀರ್ಪನ್ನು ಈ ಮಧ್ಯೆ ಬಂದ ಬರಗಾಲಗಳಲ್ಲಿ ಕರ್ನಾಟಕ ಪಾಲಿಸದಾಗಿದೆ. ಇದಕ್ಕೆ ಒಂದು ಕಾರಣ, ಕರ್ನಾಟಕ ಹೆಚ್ಚುತ್ತಿರುವ ತನ್ನ ಜನರ ನೀರಿನ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿಯನ್ನೂ ಹೊಂದಿದೆ. ಎರಡನೇ ಕಾರಣ, ಮಳೆ ಕೊರತೆ ಉಂಟಾದಾಗ ನೀರು ಹಂಚಿಕೆ ಹೇಗಿರಬೇಕೆಂಬ ಬಗ್ಗೆ ಒಂದು ನಿರ್ದಿಷ್ಟ ಸೂತ್ರ ಐತೀರ್ಪಿನಲ್ಲಿ ಇಲ್ಲವಾಗಿದೆ.

೫. ಅಂತಹ ಸಂದರ್ಭಗಳಲ್ಲಾದರೂ ಎರಡೂ ರಾಜ್ಯಗಳು ಪರಸ್ಪರ

ಕಷ್ಟಗಳನ್ನು ಹಂಚಿಕೊಂಡು ಮಾತುಕತೆಯ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಬಹುದಲ್ಲವೆ?

ಇದು ಸಾಧ್ಯವಾಗದಿರುವುದೇ ಈ ಎಲ್ಲ ತಂಟೆ ತಕರಾರುಗಳಿಗೆ ಕಾರಣವಾಗಿರುವುದು. ಇದಕ್ಕೆ ಹಲವಾರು ಕಾರಣಗಳಿವೆ. ಕನ್ನಡ ಮತ್ತು ತಮಿಳ್ನಾಡು ಭಾಷೆಗಳನ್ನಾಡುವ ಈ ಎರಡು ರಾಜ್ಯಗಳ ನಡುವೆ ಅವು ನೆರೆಹೊರೆಯ ಎರಡು ರಾಜಕೀಯ ಘಟಕಗಳಾದ ಪ್ರಾಚೀನ ಕಾಲದಿಂದಲೂ 'ಚಾರಿತ್ರಿಕ'ವೆನ್ನಬಹುದಾದ ಕಾರಣಗಳಿಂದ ಒಂದು 'ವೈರತ್ವ' ಮನೆ ಮಾಡಿದೆ. (ಇದಕ್ಕೆ ಸಾಂಸ್ಕೃತಿಕವಾಗಿ ತಮಿಳರು ಪೂರ್ಣ ದ್ರಾವಿಡರಾಗಿ ಉಳಿದಿರುವುದೂ, ಕನ್ನಡಿಗರು ಅರ್ಧ ದ್ರಾವಿಡ-ಅರ್ಧ ಆರ್ಯರಾಗಿ ಪರಿವರ್ತಿತರಾಗಿರುವುದೂ ಕಾರಣವಿರಬಹುದೆಂಬ ವಿಶ್ಲೇಷಣೆಗೂ ಅವಕಾಶವಿದೆ!) ಅದರ ಪರಿಹಾರಕ್ಕೆ ಯಾರೂ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ. ಕರ್ನಾಟಕಕ್ಕೆ, ನಿರ್ದಿಷ್ಟವಾಗಿ ಬೆಂಗಳೂರಿಗೆ ನಡೆದ ದುಡಿಯುವ ವರ್ಗಕ್ಕೆ ಸೇರಿದ ತಮಿಳರ ನಿರಂತರ ವಲಸೆ ಮತ್ತು ಅವರ ಜಿಗುಟು ಭಾಷಾಭಿಮಾನವೂ ಇದಕ್ಕೆ ಕಾರಣವಿರಬಹುದು. ನಮ್ಮ ಕನ್ನಡ ಬೀದಿ ಚಳುವಳಿ ಆರಂಭವಾದದ್ದೇ ಬಹುಪಾಲು ಇದರ ವಿರುದ್ಧವಾಗಿ ಎಂಬುದನ್ನು ನಾವು ಗಮನಿಸಬೇಕು. ಆದುದರಿಂದಲೇ ಕಾವೇರಿ ಜಲವಿವಾದದ ಸಂಬಂಧದ ಎಲ್ಲ ಗಲಭೆಗಳೂ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿರುತ್ತವೆ ಮತ್ತು ಅವು ತಮಿಳು ಜನರ ವಿರುದ್ಧ ಉದ್ದೇಶಿಸಲ್ಪಟ್ಟಿರುತ್ತವೆ. ಇದಕ್ಕೆ ಪ್ರತಿಕ್ರಿಯೆಯಾಗಿ ತಮಿಳ್ನಾಡಿನಲ್ಲೂ ಕನ್ನಡಿಗರ ಮೇಲೆ ಹಲ್ಲೆಗಳು ನಡೆಯುತ್ತವೆ. ಇಂತಹ 'ಚರಿತ್ರೆ'ಯೂ ಎರಡೂ ರಾಜ್ಯಗಳ ನಡುವಣ ಸೌಹಾರ್ದ ಮಾತುಕತೆಗಳಿಗೆ ಅಡ್ಡಿಯಾಗಿರಬಹುದು.

ಇನ್ನೊಂದು ಕಾರಣವೆಂದರೆ, ಎರಡೂ ರಾಜ್ಯಗಳ ಅಧಿಪತಿಗಳು ತಂತಮ್ಮ ರಾಜ್ಯಗಳ ಜನತೆಯ ಅಭಿವೃದ್ಧಿ ಆಶೋತ್ತರಗಳಿಗೆ ಬದ್ಧವಾಗಿ ಇತ್ತೀಚಿನ ದಿನಗಳಲ್ಲಿ 'ಅಭಿವೃದ್ಧಿ' ಎಂಬ ಆಟದ ಸ್ಪರ್ಧಾಳುಗಳಾಗಿ ಪರಿವರ್ತಿತವಾಗಿರುವುದರಿಂದ, ಯಾವುದೇ ಸಣ್ಣ ತ್ಯಾಗ ಅಥವಾ ರಾಜಿಗಳ ಮನಃಸ್ಥಿತಿಯಲ್ಲಿರುವುದಿಲ್ಲ. ನ್ಯಾಯಾಧಿಕರಣ ಅಥವಾ ನ್ಯಾಯಾಲಯಗಳ ತೀರ್ಪುಗಳ ಬಗ್ಗೆ ತಕರಾರು ತೆಗೆಯಲೂ ಇಂತಹ ಮನಃಸ್ಥಿತಿ ಒಂದು ಕಾರಣವಾಗಿರಬಹುದು.

ಇದನ್ನೆಲ್ಲ ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮದು ಒಕ್ಕೂಟ ರಾಷ್ಟ್ರವಾಗಿರುವುದು ಮೂಲತಃ ಕಾನೂನುಗಳ ಆಧಾರದ ಮೇಲೇ ಹೊರತು ಸೋದರತೆಯ ಆಧಾರದ ಮೇಲಲ್ಲ ಎಂಬುದು.

೬. ಅದಿರಲಿ, ನೀರು ಹಂಚಿಕೆ ವಿಷಯದ ಅಧಿಕಾರ ಕಾವೇರಿ ನೀರು ಮೇಲುಸ್ತುವಾರಿ ಸಮಿತಿಯದೇ ಹೊರತು ಸರ್ವೋನ್ನತ ನ್ಯಾಯಾಲಯದ್ದಲ್ಲ.

ಹಾಗಾಗಿ ಅದರ ತೀರ್ಪು ಅಸಿಂಧು ಎನ್ನುವ ವಾದ ಇದೆಯಲ್ಲ?

ಈ ವಾದವನ್ನು ಮಂಡಿಸಿರುವವರು ಮೊನ್ನೆ ಬೆಂಗಳೂರು ಹೊತ್ತಿ ಉರಿಯುತ್ತಿರುವಾಗ ಟಿವಿ ವಾಹಿನಿಯೊಂದರ ಸಂದರ್ಶನದಲ್ಲಿ ಸದರಿ ತೀರ್ಪನ್ನು 'ವಿಕ್ಷಿಪ್ತ' ಎಂದು ಕರೆದ ನಮ್ಮ ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್ ಬಿ. ವಿ. ಆಚಾರ್ಯರು. ಇದು ಅಕಾಲಿಕವಷ್ಟೇ ಅಲ್ಲ, ಅನುಚಿತವೂ ಆದ ಮಾತಾಗಿತ್ತೆಂದೇ ಹೇಳಬೇಕು. ಅವರ ಸಂವಿಧಾನ ಮತ್ತು ಕಾನೂನು ತಿಳುವಳಿಕೆ ಸರಿಯೇ ಇದ್ದು ಅವರ ಈ ಅಭಿಪ್ರಾಯವೂ ಸರಿಯೇ ಇರಬಹುದು. ಆದರೆ ಈಗ ನೀರು ಹಂಚಿಕೆ ವಿಷಯದಲ್ಲಿ ಮಧ್ಯೆ ಪ್ರವೇಶಿಸಲು ಸರ್ವೋನ್ನತ ನ್ಯಾಯಾಲಯಕ್ಕೆ ಸಂವಿಧಾನದ ಪ್ರಕಾರ ಅಧಿಕಾರವಿಲ್ಲ ಎಂದು ಹೇಳುವ ಇವರು ಮತ್ತು ಇವರ ಸಮರ್ಥಕರು ಈ ಮಾತನ್ನು ಕರ್ನಾಟಕ ಸರ್ಕಾರ ಸರ್ವೋನ್ನತ ನ್ಯಾಯಾಲಯದಲ್ಲಿ ತನ್ನ ಅಫಿಡವಿಟ್ ಸಲ್ಲಿಸುವ ಮುನ್ನವೇ ಹೇಳಬೇಕಿತ್ತು. ಎಲ್ಲ ಮುಗಿದು ನಮ್ಮ ನಿರೀಕ್ಷೆಗೆ ವ್ಯತಿರಿಕ್ತವಾಗಿ ತೀರ್ಪು ಹೊರಬಂದ ಮೇಲೆ ಆಡುವ ಇಂತಹ ಮಾತು ದ್ರಾಕ್ಷಿ ಹುಳಿ ಎಂದ ನರಿಯ ಮಾತಿನಂತಾಗುತ್ತದೆ.

ಕರ್ನಾಟಕ ಸರ್ಕಾರ ಈಗ ಕೂಡ ಈ ನಿಟ್ಟಿನಲ್ಲಿ ಸರ್ವೋನ್ನತ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸಿ, ನೀರು ಬಿಡಲು ನಿರಾಕರಿಸುವ ಆಯ್ಕೆ ಮಾಡಿಕೊಳ್ಳಬಹುದಿತ್ತೇನೋ. ಆದರೆ ಅದಕ್ಕೆ ರಾಜಕೀಯ ಒಮ್ಮತ, ಅಪರಿಮಿತ ರಾಜಕೀಯ ಇಚ್ಛಾ ಶಕ್ತಿ, ಕಾನೂನಿನ ಸ್ಪಷ್ಟ ಮತ್ತು ಖಚಿತ ತಿಳುವಳಿಕೆಯುಳ್ಳ ವಿಶ್ವಾಸಾರ್ಹ ಕಾನೂನು ತಂಡದ ಮಾರ್ಗದರ್ಶನ ಮತ್ತು ನಂತರದ ಸಾಧ್ಯ ಪರಿಣಾಮಗಳನ್ನು ನಿರ್ವಹಿಸುವ ರಾಜಕೀಯ ಜಾಣ್ಮೆ, ದಿಟ್ಟತನ ಮತ್ತು ದಕ್ಷತೆಗಳ ಅವಶ್ಯಕತೆ ಬೇಕಿತ್ತು. ಅವಾವುವೂ ಸದ್ಯಕ್ಕೆ ರಾಜ್ಯದಲ್ಲಿ ಲಭ್ಯವಿಲ್ಲ ಎಂಬುದು ರಾಜ್ಯ ಸರ್ಕಾರದ ನಿರ್ಧಾರ ತೋರಿಸುತ್ತದೆ.

೭. ಪ್ರತಿಕೂಲ ತೀರ್ಪಿಗೆ ನ್ಯಾಯಪೀಠದಲ್ಲಿದ್ದ ನ್ಯಾಯಾಧೀಶರೊಬ್ಬರು ಈ ಹಿಂದೆ ಜಯಲಲಿತಾ ಅವರ ವಕೀಲರಾಗಿದ್ದರು ಎಂಬುದೂ ಕಾರಣವಾಗಿರಬಹುದು ಎಂಬ ಅಭಿಪ್ರಾಯವಿದೆಯಲ್ಲ?

ಇದು ತೀರಾ ಅಗ್ಗದ ಮಾತು. ಹಾಗೆ ನೋಡಿದರೆ ಇಂತಹ ಮಾತನ್ನಾಡಲು ಇನ್ನೊಂದು ಕಾರಣವೂ ಇತ್ತು. ಸಂಬಂಧಿತ ನ್ಯಾಯಾಧೀಶರೂ ಮತ್ತು ತಮಿಳ್ನಾಡಿನ ಪರ ವಾದ ಮಂಡಿಸಿದ ವಕೀಲರೂ ಮಹಾರಾಷ್ಟ್ರಕ್ಕೆ ಸೇರಿದವರು. ಆದರೆ, ಸರ್ವೋನ್ನತ ನ್ಯಾಯಾಲಯದ ನ್ಯಾಯಾಧೀಶರು ಇಂತಹ ರಾಗ-ದ್ವೇಷ ಸಂಬಂಧಗಳನ್ನು ಮೀರಿದ ನ್ಯಾಯ ಪ್ರಜ್ಞೆಯನ್ನು ಹೊಂದಿರುವವರು ಎಂಬ ನಂಬಿಕೆಯ ಮೇಲೇ ನಮ್ಮ ಉನ್ನತ ನ್ಯಾಯ ವ್ಯವಸ್ಥೆ ಅಸ್ತಿತ್ವದಲ್ಲಿರುವುದು

ಮತ್ತು ಆ ನಂಬಿಕೆಯ ಆಧಾರದ ಮೇಲೇ ಅಲ್ಲಿಗೆ ನ್ಯಾಯ ಕೋರಿ ನಾವು ಹೋಗುತ್ತಿರುವುದು. ಹೀಗಿರುವಾಗ ಈಗ ಅದನ್ನು ಭಂಗಗೊಳಿಸುವವಂತಹ ಆಧಾರ ರಹಿತವಾದ ಮಾತು ಅನುಚಿತವಾದದ್ದು. ಅಥವಾ ಹಾಗೆ ನಮಗೆ ಅನ್ಯಾಯವಾಗಿದೆಯೆಂದು ನಮಗೆ ನಿಜವಾಗಿ ಅನಿಸಿದ್ದಲ್ಲಿ ಆ ಸಂಬಂಧದ ಅರ್ಜಿಯನ್ನು ವಿಚಾರಣೆಗೆ ಮುನ್ನವೇ ಸಲ್ಲಿಸಿ ಸಂಬಂಧಿತ ನ್ಯಾಯಾಧೀಶರು ನ್ಯಾಯಪೀಠದಿಂದ ಹೊರಹೋಗುವಂತಹ ಅವಕಾಶವನ್ನು ಅವರಿಗೆ ಒದಗಿಸಬೇಕಿತ್ತು.

೮. ಹಾಗಾದರೆ, ತನ್ನ ತೀರ್ಪನ್ನು ಪರಿಷ್ಕರಿಸುವಂತೆ ಕೋರಿದ್ದ ಕರ್ನಾಟಕದ ಅರ್ಜಿಯನ್ನೂ ಸರ್ವೋನ್ನತ ನ್ಯಾಯಾಲಯ ಸಹಾನುಭೂತಿಯಿಂದ ಪರಿಶೀಲಿಸದೆ ಮತ್ತಷ್ಟು ನೀರು ಬಿಡುವಂತೆ ಕರ್ನಾಟಕಕ್ಕೆ ಏಕೆ ಸೂಚಿಸಿತು?

ಇದಕ್ಕೆ ಮುಖ್ಯ ಕಾರಣ, ಕರ್ನಾಟಕದ ಅರ್ಜಿಯಲ್ಲಿದ್ದ ಎಚ್ಚರದಪ್ಪಿದ ಮತ್ತು ಬೇಜವಾಬ್ದಾರಿಯ ಮಾತುಗಳು ಮತ್ತು ಅವನ್ನು ಪೋಷಿಸುವಂತಿದ್ದ ಕರ್ನಾಟಕ ಸರ್ಕಾರದ ಆಡಳಿತದ ಭಾವ-ಭಂಗಿಗಳು. ನ್ಯಾಯಾಲಯದ ತೀರ್ಪಿನಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಮಾತಿನಲ್ಲಿ ತಪ್ಪೇನಿಲ್ಲ. ರಾಜ್ಯದ ಬಹುಜನರ ಭಾನೆಯನ್ನು ಅವರು ವ್ಯಕ್ತಪಡಿಸಿದ್ದರಷ್ಟೆ. ಆದರೆ ತೀರ್ಪಿನ ವಿರುದ್ಧ ರಾಜ್ಯಾದ್ಯಂತ ಆರಂಭವಾದ ಪ್ರತಿಭಟನೆಗಳು ಹಾಗೂ ಕರೆಕೊಡಲಾದ ಬಂದ್ ಮತ್ತು ಮುಖ್ಯವಾಗೀ ಈ ಪ್ರತಿಭಟನೆ ಹಾಗೂ ಬಂದ್‌ಗೆ ಸರ್ಕಾರದ ಸಹಾನೂಭೂತಿಯ ಬೆಂಬಲವಿದ್ದಂತಿದೆ ಎಂಬ ಅನುಮಾನ ಹುಟ್ಟಿಸುವಂತಹ ನಡೆಗಳು ನಾಡಿನ ಕಾನೂನು ಆಡಳಿತವನ್ನು ಎತ್ತಿಹಿಡಿಯುವ ಆತ್ಯಂತಿಕ ಜವಾಬ್ದಾರಿ ಹೊತ್ತ ಸರ್ವೋನ್ನತ ನ್ಯಾಯಾಲಯದ ಗಮನಕ್ಕೆ ಬಂದಿದೆ. ನಿರ್ದಿಷ್ಟವಾಗಿ ಸರ್ಕಾರದ ಪರಿಷ್ಕರಣಾ ಅರ್ಜಿಯಲ್ಲಿದ್ದ ರಾಜ್ಯಕ್ಕೆ ಸಮರ್ಪಕ ನ್ಯಾಯ ಸಿಗದಿದ್ದರೆ ಕಾನೂನು ಮತ್ತು ಶಿಸ್ತಿನ ಪರಿಸ್ಥಿತಿ ಕೈ ಮೀರಿ ಹೋದೀತು ಎಂಬ ಮಾತು ನ್ಯಾಯದಾನ ವ್ಯವಸ್ಥೆಗೆ ಒಡ್ಡಿದ ಪರೋಕ್ಷ ಬೆದರಿಕೆಯಂತೆಯೇ ಸರ್ವೋನ್ನತ ನ್ಯಾಯಾಲಯಕ್ಕೆ ಕಂಡಿದ್ದರೆ ಆಶ್ಚರ್ಯವಿಲ್ಲ. ಏಕೆಂದರೆ ಎಂತಹ ಪರಿಸ್ಥಿತಿಯಲ್ಲೂ ಕಾನೂನು ಮತ್ತು ಶಿಸ್ತನ್ನು ಕಾಪಾಡಬೇಕಾದ ಸಾಂವಿಧಾನಿಕ ಜವಾಬ್ದಾರಿ ಹೊತ್ತಿರುವ ರಾಜ್ಯ ಸರ್ಕಾರವೇ ಇಂತಹ ಆತಂಕವನ್ನು ಸೂಚಿಸುವುದನ್ನು ಅದರ ಬೇಜವಾಬ್ದಾರಿತನ ಅಥವಾ ಅಸಾಮರ್ಥ್ಯ ಮತ್ತು ಅದಕ್ಷತೆಯ ಒಪ್ಪಿಗೆಯಂತೆ ನ್ಯಾಯಾಲಯ ಗ್ರಹಿಸುವುದು ಸಹಜವೇ ಆಗಿದೆ. ಜೊತೆಗೆ ಪರಿಷ್ಕರಣಾ ಅರ್ಜಿಯ ವಿಚಾರಣೆಯ ದಿನ ರಾಜ್ಯದಲ್ಲಿ, ವಿಶೇಷವಾಗಿ ಬೆಂಗಳೂರಿನಲ್ಲಿ ಆರಂಭವಾದ ನಿಯಂತ್ರಣದ ಪ್ರಯತ್ನವೇ ಇಲ್ಲದಂತೆ ತೋರಿದ ಬೃಹತ್ ಪ್ರಮಾಣದ

ಹಿಂಸಾಚಾರವೂ ನ್ಯಾಯಾಲಯವನ್ನು ಪ್ರಭಾವಿಸಿರಬಹುದು. ಹಾಗಾಗಿಯೇ ಅದು ಮಾಜಿ ಪ್ರಧಾನ ಮಂತ್ರಿ ದೇವೇಗೌಡರು ಹೇಳಿದಂತೆ, ರಾಜ್ಯ ದಿನವಹಿ ಬಿಡಬೇಕಾದ ನೀರಿನ ಪ್ರಮಾಣವನ್ನು ತಗ್ಗಿಸಿದರೂ ಅದನ್ನು ಬಿಡಬೇಕಾದ ದಿನಗಳ ಸಂಖ್ಯೆಯನ್ನು ಹೆಚ್ಚಿಸಿ, ರಾಜ್ಯ ಬಿಡಬೇಕಾದ ಒಟ್ಟು ನೀರಿನ ಪ್ರಮಾಣವನ್ನು ಏರಿಸುವ 'ಕಠಿಣ ಶಿಕ್ಷೆ'ಯನ್ನು ನೀಡಿದೆ ಎನಿಸುತ್ತದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರದ ಅರ್ಜಿಯ ಮೇಲುಸ್ತುವಾರಿ ವಹಿಸಿದ್ದ ಹಿರಿಯ ವಕೀಲ ಫಾಲಿ ನಾರಿಮನ್ ಎಡವಿದ್ದಾರೆ ಎಂದೇ ಹೇಳಬೇಕು.

೯. ಈ ಹಿಂಸಾಚಾರ ಹೀಗೆ ಭುಗಿಲೇಳಲು ನಮ್ಮ ಟಿವಿ ವಾಹಿನಿಗಳೂ ಕಾರಣವೆಂಬ ಅಭಿಪ್ರಾಯವಿದೆಯಲ್ಲ?

ಹೌದು, ಬಹಳ ಜನ ಹಾಗೇ ಹೇಳುತ್ತಿದ್ದಾರೆ. ಆದರೆ ರಾಜ್ಯದ ಜನರಿಗೆ ಸೂಕ್ತ ನಾಯಕತ್ವ ನೀಡುವಲ್ಲಿ ರಾಜಕೀಯ ನಾಯಕರು ಮತ್ತು ಬುದ್ಧಿಜೀವಿ ವರ್ಗ ವಿಫಲವಾದ ಪರಿಣಾಮವಿದು ಎಂದು ಹೇಳುವುದು ಹೆಚ್ಚು ಸೂಕ್ತವಾದೀತು. ಈ ಎರಡೂ ಸ್ತರದ ನಾಯಕತ್ವದ ಗೈರು ಹಾಜರಿಯನ್ನು ಟಿವಿ ಮಾಧ್ಯಮಗಳು ರಾಜ್ಯದ ಹಿತವನ್ನು ಎತ್ತಿ ಹಿಡಿಯುವ ನೆಪದಲ್ಲಿ ತಮ್ಮ ವ್ಯಾಪಾರಿ ಲಾಭಗಳಿಗಾಗಿ ದುರುಪಯೋಗಪಡಿಸಿಕೊಂಡವು. ಸರ್ವೋನ್ನತ ನ್ಯಾಯಾಲಯದ ಮೊದಲ ಮತ್ತು ನಂತರದ ಪರಿಷ್ಕೃತ ತೀರ್ಪನ್ನು ಈ ಮಾಧ್ಯಮಗಳು ವ್ಯಾಖ್ಯಾನಿಸಿದ ಬಗೆಗಳು ಮತ್ತು ಅದಕ್ಕಾಗಿ ಬಳಸಿದ ಆವೇಶದ ಭಾಷೆ ಮತ್ತು ಶೀರ್ಷಿಕೆಗಳು ಹಿಂಸಾತ್ಮಕ ಪ್ರತಿಭಟನೆಗೆಗಳನ್ನು ಪ್ರೇರೇಪಿಸುವಂತಹ ವಾತಾವರಣವನ್ನು ನಿರ್ಮಿಸಿದವು ಎಂಬುದರಲ್ಲಿ ಎರಡು ಮಾತಿಲ್ಲ.

ಹಾಗೆ ನೋಡಿದರೆ ಹಿಂಸಾಚಾರದ ಘಟನೆಗಳು ಆರಂಭವಾದದ್ದೇ, ಸಾಮಾಜಿಕ ಜಾಲ ತಾಣವೊಂದರಲ್ಲಿ ತಮಿಳ್ನಾಡಿನ ಪರ ಅಭಿಪ್ರಾಯಗಳನ್ನು ದಾಖಲಿಸಿದ್ದನೆಂದು ಬೆಂಗಳೂರಿನ ಕಾಲೇಜು ವಿದ್ಯಾರ್ಥಿಯೊಬ್ಬನನ್ನು ಕನ್ನಡ ಪರ ಚಳುವಳಿಕಾರರು ಕಾಲೇಜಿನ ಆವರಣದಲ್ಲಿ ಹುಡುಕಿ ಎಲ್ಲರ ಸಮ್ಮುಖದಲ್ಲಿ ಥಳಿಸಿದ ಅಸಭ್ಯವೆನ್ನಬಹುದಾದ ಘಟನೆಯ ದೃಶ್ಯವನ್ನು ನಮ್ಮ ವಾಹಿನಿಗಳು ಪದೇ ಪದೇ ಪ್ರದರ್ಶಿಸಿದ ಪರಿಣಾಮವಾಗಿ ಎಂದು ಹೇಳಲಾಗುತ್ತಿದೆ. ಈ ದೃಶ್ಯ ತಮಿಳ್ನಾಡಿನಲ್ಲಿ ಕರ್ನಾಟಕ ಸಾರಿಗೆ ಬಸ್‌ವೊಂದರ ಚಾಲಕನ ಮೇಲೆ ಹಾಗೂ ಚೆನ್ನೈನ ಕನ್ನಡಿಗರ ಹೊಟೆಲ್‌ವೊಂದರ ಮೇಲೆ ದಾಳಿಗಳನ್ನು ಪ್ರೇರೇಪಿಸಿತೆಂದು ಈ ಪ್ರಾರಂಭಿಕ ಘಟನಾವಳಿಯ ಅನುಕ್ರಮಣಿಕೆಯನ್ನು ಗಮನಿಸಿದರೆ ಗೊತ್ತಾಗುತ್ತದೆ. ಇಂತಹ ದೃಶ್ಯಗಳನ್ನು ಇಂತಹ ಉದ್ವಿಗ್ನ ಸಂದರ್ಭಗಳಲ್ಲಿ ತೋರಿಸಬಾರದು ಎಂಬ ಸಾಮಾನ್ಯ ಪರಿಜ್ಞಾನವಾಗಲೀ ಕನಿಷ್ಟ ವಿವೇಕವಾಗಲೀ ಈ ಟಿವಿ ವಾಹಿನಿಗಳು ಪ್ರದರ್ಶಿಸದಿದ್ದುದು ಸದ್ಯದ ಮಾಧ್ಯಮ

ಪರಿಪ್ರೇಕ್ಷದಲ್ಲಿ ಆಶ್ಚರ್ಯವೇನಿಲ್ಲ.

ನಮ್ಮ ಎಲ್ಲ ಟಿವಿ ವಾಹಿನಿಗಳೂ ಹಣದ ಮೂಟೆಗಳ ಒಡೆತನದಲ್ಲಿದ್ದು ಆ ಮೂಟೆಗಳ ಗಾತ್ರವನ್ನು ಹೆಚ್ಚಿಸುವುದೇ ಅವುಗಳ ಬಾಡಿಗೆ ಬಂಟರ ಮುಖ್ಯ ಕರ್ತವ್ಯವಾಗಿರುತ್ತದೆ ಮತ್ತು ಅದಕ್ಕಾಗಿ ಅವರು ತೀವ್ರ ಸ್ಪರ್ಧೆ ನಡೆಸಬೇಕಾಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗಾಗಿ ಸರಾಸರಿ ಜನಸಮೂಹ ನೋಡಲು ಹಾತೊರೆಯುವಂತಹ ರೋಚಕ ಸುದ್ದಿ ನಿರೂಪಣೆ ಮತ್ತು ದೃಶ್ಯಗಳಿಗೆ ಅಲ್ಲಿ ಆದ್ಯತೆ ಇರುವುದು ಸಹಜವೇ ಆಗಿದೆ. ಇಲ್ಲದಿದ್ದರೆ, ತಮಿಳ್ನಾಡಿನ ಮುಖ್ಯಮಂತ್ರಿ ಜಯಲಲಿತಾರನ್ನು 'ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಗಂಡುಬೀರಿ ತಾಟಕಿ' ಎಂದು ವರ್ಣಿಸುವಂತಹ 'ಗುರೂಜಿ' ಎಂದು ಕರೆದುಕೊಳ್ಳುವ ಮನುಷ್ಯನ ಬಾಯಿಂದ ಆಡಿಸಲು 'ಬುದ್ಧಿವಂತ'ನೆಂದು ಕರೆಯಲಾಗುವ ಪತ್ರಕರ್ತನೊಬ್ಬನ ನೇತೃತ್ವದ ವಾಹಿನಿ ಹಿಂಜರಿಯಬೇಕಿತ್ತು. ಆ 'ಗುರೂಜಿ' ಅಂತಹ ಮಾತುಗಳನ್ನಾಡಿದಾಗ ನಿರೂಪಕರಾದರೂ ಅಂತಹ ಮಾತುಗಳು ಅನುಚಿತ ಎಂದು ಹೇಳಿ ತಮ್ಮ ಮಾಧ್ಯಮ ಮರ್ಯಾದೆ ಉಳಿಸಿಕೊಳ್ಳಬೇಕಿತ್ತು.

ಹಾಗೇ ಜಯಲಲಿತಾ ಅವರ ಚಿತ್ರಕ್ಕೆ ಚಪ್ಪಲಿಯಿಂದ ಹೊಡೆಯುವ ದೃಶ್ಯವನ್ನು ಪದೇ ಪದೇ ತೋರಿಸುವ ಅಗತ್ಯವಾದರೂ ಏನಿತ್ತು? (ಹಾಗೆ ನೋಡಿದರೆ ಜಯಲಲಿತಾ ಈ ವಿಷಯದಲ್ಲಿ ಏನು ಅಪರಾಧ ಮಾಡಿದ್ದಾರೆ? ಅವರು ತಮ್ಮ ರಾಜ್ಯದ ರೈತರ ಹಿತ ಕಾಪಾಡುವ ಪ್ರಯತ್ನ ಮಾಡಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರಷ್ಟೇ ಅಲ್ಲವೆ?) ವಾಹಿನಿಗಳಿಗೆ ವಾಸ್ತವದ ಚಿತ್ರಣ ಕೊಡುವ ಮಾಧ್ಯಮ ಉದ್ದೇಶದ ಜೊತೆಗೇ ಸಾರ್ವಜನಿಕ ಜವಾಬ್ದಾರಿಯ ಅರಿವೂ ಇರಬೇಕಲ್ಲವೆ? ಹಾಗಿದ್ದಿದ್ದಲ್ಲಿ, ನಂತರದ ಚರ್ಚೆಗಳಲ್ಲಾದರೂ ನೆರೆ ರಾಜ್ಯದ ಮುಖ್ಯಮಂತ್ರಿಯೊಬ್ಬರನ್ನು ಹೀಗೆ ಅವಮಾನಿಸುವಂತಹ ಮಾತು ಮತ್ತು ನಡೆಗಳನ್ನು ಖಂಡಿಸುವ ಮಾತಾದರೂ ಕೇಳಿಬರಬೇಕಿತ್ತು. ಆದರೆ ಇವರು ಬೆಂಗಳೂರು ಹೊತ್ತಿ ಉರಿಯುತ್ತಿದ್ದಾಗ ಚರ್ಚೆಗೆ ಕರೆಯುತ್ತಿದ್ದುದಾರೂ ಎಂತಹವರನ್ನು? ಬಹುತೇಕ ಅಪ್ಪಟ ರಾಜಕೀಯ ಪುಢಾರಿಗಳು, ಅದೇ ಮಟ್ಟದ ರಾಜಕೀಯ ವ್ಯಾಖ್ಯಾನಕಾರರನ್ನೇ ಹೊರತು, ಪ್ರಬುದ್ಧ ರಾಜಕೀಯ ನಾಯಕರನ್ನಾಗಲೀ, ನೀರಾವರಿ ಮತ್ತು ಕಾನೂನು ತಜ್ಞರನ್ನಾಗಲೀ ಅಥವಾ ನಾಡಿನ ಸಂಸ್ಕೃತಿ ಚಿಂತಕರನ್ನಾಗಲೀ ಅಲ್ಲ.

ಮೊನ್ನೆಯ ಕಾವೇರಿ ಗಲಾಟೆಯಲ್ಲಿ ನಮ್ಮ ದೃಶ್ಯ ಮಾಧ್ಯಮಗಳ ಬೇಜವಾಬ್ದಾರಿತನ ಬಯಲಾಗಿ, ಅಲ್ಲೊಂದಿಷ್ಟು ಆಳದ ಆತ್ಮಾವಲೋಕನದ ಮತ್ತು ಮೂಲಭೂತ 'ರಿಪೇರಿ'ಯ ತುರ್ತು ಅಗತ್ಯವಿದೆ ಎಂಬುದು ಸಾಬೀತಾಯಿತೆಂದೇ ಹೇಳಬೇಕು. ಹಾಗೇ ನೋಡಿದರೆ ಈ ಸಂದರ್ಭದಲ್ಲಿ

ಮುದ್ರಣ ಮಾಧ್ಯಮ ಹೆಚ್ಚಿನ ಪ್ರಬುದ್ಧತೆ ಪ್ರದರ್ಶಿಸಿದ್ದು ಎದ್ದು ಕಾಣುವಂತಿತ್ತು. ಇದೆಲ್ಲದರಿಂದ ಮೂಡಿಬಂದ ಒಂದು ದೊಡ್ಡ ಸತ್ಯವೆಂದರೆ, ಇಂದು ಕರ್ನಾಟಕದ ಜನತೆಗೆ ಒಂದು ರಾಜಕೀಯ ಅಥವಾ ಬೌದ್ಧಿಕ ನಾಯಕತ್ವವವೇ ಇಲ್ಲದಾಗಿದ್ದು, ದೃಶ್ಯ ಮಾಧ್ಯಮಗಳ ಅಗ್ಗದ ಜನಪ್ರಿಯತೆಯ ಮಾತುಗಳ ನಿರೂಪಕರೇ ಆ ಜಾಗವನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದರ ಪರಿಣಾಮವೆಂದರೆ, ಒಂದು ಕಾಲದಲ್ಲಿ ಪ್ರಬುದ್ಧ ಜನತೆ ಮತ್ತು ನಾಯಕತ್ವಕ್ಕೆ ಹೆಸರಾಗಿದ್ದ ಕರ್ನಾಟಕ ಇಂದು ದೇಶದ ಕಣ್ಣಲ್ಲಿ ಒಂದು ಜಗಳಗಂಟ ಮತ್ತು ಪುಂಡಾಟಿಕೆಯ ರಾಜ್ಯವೆನಿಸಿಕೊಳ್ಳುವ ಹಂತ ತಲುಪಿದೆಯೇನೋ ಎಂಬ ಆತಂಕ ಉಂಟಾಗಿದೆ.

೧೦. ಈ ಇಡೀ ಘಟನಾವಳಿಯಲ್ಲಿ ಸರ್ಕಾರ ಸೂಕ್ತ ಜವಾಬ್ದಾರಿಯಿಂದ ನಡೆದುಕೊಂಡಿದೆ ಎನಿಸಿದೆಯೆಯೇ?

ಹಾಗೆ ಅನಿಸುವುದಿಲ್ಲ. ನ್ಯಾಯಾಲಯಕ್ಕೆ ಪ್ರತಿ–ಅರ್ಜಿ ಸಲ್ಲಿಸುವ ಮುನ್ನ ಕಾವೇರಿಯ ಕಣಿವೆ ಜನರಿಗೆ ಕುಡಿಯುವ ನೀರನ್ನಷ್ಟೇ ಒದಗಿಸುವಷ್ಟು ನೀರು ಸಂಗ್ರಹ ನಮ್ಮಲ್ಲಿದ್ದು, ರೈತರಿಗೆ ಕೃಷಿ ಉದ್ದೇಶಗಳಿಗಾಗಿ ನೀರು ಹಾಯಿಸುವುದು ಕಷ್ಟ ಎಂದು ಸಾರ್ವಜನಿಕ 'ಎಚ್ಚರಿಕೆ' ಕೊಟ್ಟು ತಮಿಳ್ನಾಡಿಗೆ ಒಂದು ತೊಟ್ಟೂ ನೀರು ಬಿಡುವುದಿಲ್ಲ ಎಂದು ಘೋಷಿಸಿದ್ದ ಸರ್ಕಾರ, ಸರ್ವೋನ್ನತ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಸದ್ಯಕ್ಕೆ ತಮಿಳ್ನಾಡಿಗೆ ಪ್ರತಿದಿನ ಹತ್ತು ಸಾವಿರ ಕ್ಯೂಸೆಕ್ಸ್ ನೀರು ಬಿಡುವುದಾಗಿ ಹೇಳಿದ್ದು, ರಾಜ್ಯ ಸರ್ಕಾರದ ವಿಶ್ವಾಸಾರ್ಹತೆಯನ್ನು ರಾಜ್ಯದ ಜನರ ಕಣ್ಣಿನಲ್ಲೇ ಅನುಮಾನಾಸ್ಪದಗೊಳಿಸಿತು. ಇನ್ನು ನ್ಯಾಯಾಲಯಕ್ಕೆ ಏನನ್ನಿಸಿರಬಹುದು? ನ್ಯಾಯಾಲಯದ ತೀರ್ಪಿನ ನಂತರ ತಮಿಳ್ನಾಡಿಗೆ ದಿನಕ್ಕೆ ಹದಿನೈದು ಸಾವಿರ ಕ್ಯೂಸೆಕ್ಸ್ ನೀರು ಬಿಡಲಾರಸಿದ್ದರ ಜೊತೆಗೇ ಕರ್ನಾಟಕದ ಕಾವೇರಿ ಕಣಿವೆಯ ರೈತರಿಗೂ ನೀರು ಬಿಡಲಾರಂಭಿಸಿದ ನಿರ್ಧಾರ ಈ ವಿಶ್ವಾಸಾರ್ಹತೆಯನ್ನು ಇನ್ನಷ್ಟು ಕುಗ್ಗಿಸಿತು. ಜೊತೆಗೆ ನಮ್ಮ ಜಲಸಂಪನ್ಮೂಲ ಸಚಿವರು ಇದೆಲ್ಲದರ ಸಮರ್ಥನೆಯಾಗಿ, ಕಳೆದ ನಲವತ್ತು ವರ್ಷಗಳ ನೀರು ಸಂಗ್ರಹದ ಸರಾಸರಿ ಲೆಕ್ಕದ ಪ್ರಕಾರ ಕಾವೇರಿ ಕಣಿವೆಯ ಜನರಿಗೆ ಮತ್ತು ರೈತರಿಗೆ ನೀರು ಒದಗಿಸಲು ತೊಂದರೆ ಇಲ್ಲ ಎಂದು ಹೊಸ ಲೆಕ್ಕಾಚಾರ ಮಂಡಿಸಿದ್ದು, ಸರ್ಕಾರ ತನ್ನ ಜನರನ್ನೇ ಕಣ್ಕಟ್ಟಿಗೆ ಈಡು ಮಾಡುತ್ತಿದೆಯೇನೋ ಎಂಬ ಅನುಮಾನಕ್ಕೆ ಕಾರಣವಾಯಿತು. ಇನ್ನು ಬಂದ್ , ಪ್ರತಿಭಟನೆ ಮತ್ತು ಹಿಂಸಾಚಾರಗಳ ವಿಷಯದಲ್ಲಿ ಸರ್ಕಾರ ಗುಮ್ಮನೆ ಗುಸಕನಂತೆ ವರ್ತಿಸಿದ ರೀತಿಯಂತೂ ಈ ಸರ್ಕಾರದ ಆತ್ಮವಿಶ್ವಾಸದ ಬಗೆಗೇ ಅನುಮಾನ ಸೃಷ್ಟಿಸಿತು. ಈಗ ಸರ್ಕಾರ ಏನು ಹೇಳಿದರೂ ಅದರ ಮುಖ ಬೆಲೆಯಲ್ಲಿ ಅದನ್ನು ನಂಬಲಾಗದ ಪರಿಸ್ಥಿತಿ

ಉಂಟಾಗಿದೆ. ಇದು ನಮ್ಮ ಸರ್ಕಾರದ ನಾಯಕತ್ವದ ದೊಡ್ಡ ಸೋಲು ಎಂದೇ ಹೇಳಬೇಕಿದೆ. ಸರ್ವೋನ್ನತ ನ್ಯಾಯಾಲಯದಲ್ಲಿನ ನಮ್ಮ ಸೋಲುಗಳ ಸರಣಿಯ ಮೂಲ ಇಲ್ಲೇ ಇದೆ ಎನಿಸುತ್ತದೆ. ಇದಕ್ಕೆ ಆಳುವ ಪಕ್ಷವೊಂದೇ ಕಾರಣವಾಗಿರದೆ, ಎಲ್ಲ ರಾಜಕೀಯ ಪಕ್ಷಗಳ ಸಮಯಸಾಧಕ ಸ್ವಾರ್ಥ ರಾಜಕೀಯ ನಿಲುವುಗಳೂ ಕಾರಣವಾಗಿದೆ. ಇದರ ಆತ್ಯಂತಿಕ ಪರಿಣಾಮವೆಂದರೆ, ನಾವು ನೀರನ್ನೂ ಕಳೆದುಕೊಂಡೆವು; ನಮ್ಮದೇ ಆಸ್ತಿಪಾಸ್ತಿ ಹಾಗೂ ಆದಾಯಗಳಿಗೂ ನಷ್ಟ ತಂದುಕೊಂಡೆವು. ಇದಕ್ಕಿಂತ ಮೂರ್ಖತನ ಇನ್ನೊಂದಿದೆಯೇ?

೧೧. ಇದೆಲ್ಲದರಿಂದ ನಾವು ಕಲಿಯಬೇಕಾದ ಪಾಠಗಳು ಯಾವುವು?

ಈ ಎಲ್ಲದರಿಂದ ಕಲಿಯಬೇಕಾದ ಒಂದು ಮುಖ್ಯ ಪಾಠವೆಂದರೆ, ಸದ್ಯದ ಒಕ್ಕೂಟ ವ್ಯವಸ್ಥೆಯಲ್ಲಿ ನದಿಯೊಂದರ ಮೇಲ್ದಂಡೆ ರಾಜ್ಯವೆಂದಾಕ್ಷಣ ಅದು ಯಜಮಾನ ರಾಜ್ಯದಂತೆ ವರ್ತಿಸುವುದರಿಂದ ನಷ್ಟಕ್ಕೆ ಒಳಗಾಗುವ ಸಂಭವವೇ ಹೆಚ್ಚು. ಆದುದರಿಂದ ಜನಪ್ರಿಯ ರಾಜಕಾರಣದ ಒತ್ತಡಗಳಿಗೆ ಈಡಾಗದೆ ತನ್ನ ನಿಲುವನ್ನು ವಸ್ತುನಿಷ್ಠ ಅಂಕಿ-ಅಂಶಗಳಿಂದ ಸಜ್ಜುಗೊಳಿಸಿಟ್ಟುಕೊಂಡಿರುವುದು ಒಳ್ಳೆಯದು.

ಇನ್ನು ಇಷ್ಟೆಲ್ಲ ಅನಾಹುತಗಳ ನಂತರವೂ ಪಶ್ಚಿಮಘಟ್ಟದ ಹೆಮ್ಮೆಯ ನಾಡಿನವರಾದ ನಾವು ಕಲಿಯಲು ಸುತರಾಂ ನಿರಾಕರಿಸಿರುವ ಇನ್ನೊಂದು ಮುಖ್ಯ ಪಾಠ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ್ದು. ನೀರಿಗಾಗಿ ಹೀಗೆ ಹೊಡೆದಾಡುವ ಸಂದರ್ಭ ಪದೇ ಪದೇ ಬರಲು, ಮೊದಲಿನಂತೆ ನಮ್ಮ ಜಲಾಶಯಗಳು ತುಂಬುವಷ್ಟು ಮಳೆ ಆಗದಿರಲು ಏನು ಕಾರಣವೆಂಬ ಪ್ರಶ್ನೆ ಈ ಗಲಾಟೆಯ ಮಧ್ಯೆ ಕಳೆದೇ ಹೋಗಿದೆ. ಈ ಪ್ರಶ್ನೆ ಸರ್ಕಾರದ ಮಟ್ಟದಲ್ಲೂ, ಜನತೆಯ ಮಟ್ಟದಲ್ಲೂ ಕಳೆದುಹೋಗಲು ಮುಖ್ಯ ಕಾರಣ, ಅದಕ್ಕೆ ಒದಗುವ ಉತ್ತರ ಸುಲಭ ಸುಖಗಳ ಇಂದಿನ ದಿನಗಳಲ್ಲಿ ಜನಪ್ರಿಯವಾಗದಂತಹದ್ದು ಎಂಬುದೇ ಆಗಿದೆ. ಅದು ಸರ್ಕಾರದ ನೀತಿ ನಿರ್ಧಾರಗಳಲ್ಲಿ ಹಾಗೂ ನಮ್ಮ ಆಲೋಚನಾ ಕ್ರಮ ಮತ್ತು ಬದುಕಿನ ಕ್ರಮಗಳಲ್ಲಿ ಕೆಲ ಮೂಲಭೂತ ಬದಲಾವಣೆಗಳನ್ನು ಒತ್ತಾಯಿಸುವಂತಹದು. ಕೆಲ ಆಧುನಿಕ ಸುಖ-ಸವಲತ್ತುಗಳ ತ್ಯಾಗವನ್ನು ಅಪೇಕ್ಷಿಸುವಂತಹುದು. ಜನತಾ ಹೋರಾಟ ಜನಪ್ರಿಯ ನೆಲೆಗಳಿಂದ ಜವಾಬ್ದಾರಿ ಸಹಿತವಾದ ಒಂದು ಹೊಸ ಅರಿವಿನ ನೆಲೆಗಳಿಗೆ ಬದಲಾಗಬೇಕಾದ ಅಗತ್ಯವನ್ನು ಬೇಡುವಂತಹುದು.

ಇದೆಲ್ಲ ಸಾಧ್ಯವಾಗುವುದು ಇದನ್ನೆಲ್ಲ ಸಾಧ್ಯಮಾಡುವಂತಹ ಒಂದು ಹೊಸ ಪ್ರಬುದ್ಧ ನಾಯಕತ್ವ ಕರ್ನಾಟಕಕ್ಕೆ ಒದಗಿದಾಗ. ಅದನ್ನು ಒದಗಿಸುವವರಾದರೂ ಯಾರು? ಹೇಗೆ? ಇದೇ ಇಂದಿನ ಮುಖ್ಯ ಪ್ರಶ್ನೆ.

ಗಾಂಧೀಜಿ ನನಗೇನು ಮಾಡಿದರು?

– ಬರೆದವರು: ಒಬ್ಬ ಸಾಮಾನ್ಯ

ಗಾಂಧೀಜಿಯ ಜನ್ಮ ಶತಾಬ್ದಿ ಹತ್ತಿರ ಹತ್ತಿರವಾಗುತ್ತಿರುವಾಗ ಆ ಮಹಾತ್ಮನಿಂದ ನನ್ನ ಜೀವನದ ಮೇಲಾಗಿರುವ ಪರಿಣಾಮಗಳನ್ನು ಚಿಂತಿಸುತ್ತಿರುತ್ತೇನೆ. ನಾನು ನನ್ನನ್ನು ಗಾಂಧೀವಾದಿಯೆಂದು ಕರೆದುಕೊಳ್ಳಲಾರೆ. ಈ ದೇಶದಲ್ಲಿ ನಿಜವಾಗಿ ಎಲ್ಲ ವಿಧದಿಂದ ಗಾಂಧೀವಾದಿ ಎನ್ನಿಸಿಕೊಳ್ಳುವವರು ಕೈಬೆರಳಲ್ಲೆಣಿಸುವಷ್ಟು ಜನ ಇದ್ದಾರೋ ಇಲ್ಲವೋ. ಏಕೆಂದರೆ ಗಂಧೀವಾದವೆಂಬುದು ತರ್ಕಬದ್ಧವಾದ ತಾತ್ವಿಕ ಮೀಮಾಂಸೆಯೆಂದು ನಾನೆಣಿಸುವುದಿಲ್ಲ. ಅದು ಎತ್ತರಕ್ಕೆ ಹಾರುವ ಬೌದ್ಧಿಕ ಕಸರತ್ತಲ್ಲ. ಅದು ಒಂದೊಂದೆ ಮೆಟ್ಟಲು ಹತ್ತಿ ನೆಲದ ಸ್ಪರ್ಶವನ್ನು ಬಿಡದೇನೇ ಎತ್ತರದಲ್ಲಿ ಬಾಳುವ ಜೀವನವಿಧಾನ. ಅದು ಬೌದ್ಧಿಕ ಕಸರತ್ತಿಗಿಂತಲೂ ಕಠಿಣವಾದ ಕಸರತ್ತು. ಏಕೆಂದರೆ ತಾನು ಮಾಡಿ ತೋರಿಸಲಾರದ್ದನ್ನು ಆಡಿ ತೋರಿಸುವುದು ಗಾಂಧೀವಾದಕ್ಕೊಂದು ದ್ರೋಹ. ಮತ್ತೆ ನಮ್ಮಲ್ಲಿ ಯಾರು ತಾನೆ ಸ್ವತಃ ಮಾಡಲಾರದ್ದನ್ನು ಉಪದೇಶಿಸಲು ಆತುರಪಡುವುದಿಲ್ಲ? ನಿಜವಾದ ಗಾಂಧೀವಾದಿ ಗಾಂಧಿಯೊಬ್ಬನೆಯೋ ಏನೋ.

ಆದರೂ ನಮ್ಮೀ ದೇಶದಲ್ಲಿ ತೀರ ಗಾಂಧೀಯುಲ್ಲದವನು ಯಾರಿದ್ದಾನು? ಗಾಂಧಿಯ ಶಕ್ತಿ ಇಲ್ಲಿಯ ನೆಲ, ನೀರು, ಗಾಳಿಗಳಲ್ಲಿ ಬೆರೆತು ಹೋಗಿದೆ. ಯಾವುದೋ ಹಿತಕರವಾದ ವಿಕಿರಣಶೀಲ ಧಾತುವಿನ ಹಾಗೆ ಅದು ಶತಮಾನಗಳ ಕಾಲ ನಮ್ಮೀ ದೇಶದಲ್ಲಿ ತನ್ನ ವಿದ್ಯುತ್ಕಿರಣಗಳನ್ನು ವಿಸರ್ಜಿಸುತ್ತಲೇ ಉಳಿವುದು. ಗಾಂಧಿ ಕೊಂದವನೂ ಮೊದಲು ಅವನನ್ನು ನಮಿಸಿದನಂತನಲ್ಲ.

ನನಗೆ ಎಂಟು ವರ್ಷವಾಗಿದ್ದಿರಬೇಕು. ಆಗ ನಾನಿದ್ದದ್ದು ಮಲೆನಾಡಿನ ಕೊಂಪೆಯಲ್ಲಿ ೧೯೨೨ ಇರಬಹುದು. ಪತ್ರಗಳೇ ವಾರಕ್ಕೊಮ್ಮೆ ಬರುತ್ತಿದ್ದ ಸ್ಥಳ. ರಾಜಕಾರಣವೆಲ್ಲಿಂದ ಬರಬೇಕು? ಅಲ್ಲಿ ನಾನು ಮೊದಲು ಬಾರಿ ಗಾಂಧಿಯನ್ನು ಕಂಡೆ ಯಾರೋ ಜವಳಿ ಹೊತ್ತುಮಾರುವವನು ತಂದಿದ್ದ ಖಣಗಳ ಗಂಟಿನಲ್ಲಿ. ೪೫ ವರ್ಷಗಳ ಹಿಂದಿನ ಆ ಖಣ ಇಂದಿಗೂ ನಿಚ್ಚಳವಾಗಿ ನನ್ನ ನೆನಪಿನಲ್ಲಿ ನಿಂತುಹೋಗಿದೆ. ಕರಿಯ ಖಣದ ಮೈಮೇಲೆಲ್ಲ ಸಾಲುಸಾಲಾಗಿ 'ಮಹಾತ್ಮ ಗಾಂಧೀ ಕಿ ಜೈ' ಎಂದು ಬಾಲಬೋಧ ಲಿಪಿಯಲ್ಲಿ ನೇಯ್ದಿತ್ತು. ವ್ಯಾಪಾರಿ–ಅವನ ಹೆಸರೇಕೆ, ಮುಖ ಕೂಡ ಸ್ಮರಣೆಯಲ್ಲಿಲ್ಲ–

ಗಾಂಧೀ ಮಹಾತ್ಮನ ಹಿರಿಮೆಯನ್ನು ಬಣ್ಣಿಸಿದ. ಅವನ ಮಹಿಮೆಯಿಂದ ರೋಗಗಳು ವಾಸಿಯಾಗುತ್ತವೆ ಎಂದ. ನನ್ನ ತಾಯಿಗೆ ಹೆಗಲಲ್ಲೊಂದು ನೋವಿತ್ತು. ತೋಳನ್ನು ಸರಿಯಾಗಿ ಮೇಲೆತ್ತಲು ಆಗುತ್ತಿರಲಿಲ್ಲ. ಗಾಂಧಿಗೆ ಒಂದು ರೂಪಾಯಿ ಕಾಣಿಕೆ ಹೇಳಿಕೊಳ್ಳಿ, ಗುಣವಾಗುತ್ತೆ ಎಂದ.

ತಾಯಿ ಹರಸಿಕೊಂಡರು. ಕೆಲವು ದಿನಗಳಲ್ಲೇ ಗುಣವಾಯಿತು. ಯಾರ ಮೂಲಕವೋ ಒಂದು ರೂಪಾಯಿ ಕಳಿಸಿದರು ತಾಯಿ. ಗಾಂಧೀಜಿ ಆಗ ತಿಲಕ ಸ್ವರಾಜ್ಯ ಫಂಡಿಗೆ ಹಣ ಕೂಡಿಸುತ್ತಿದ್ದರೆಂದು ಎಷ್ಟೋ ವರ್ಷಗಳ ನಂತರ ಓದಿ ನನ್ನ ತಾಯಿಯ ರೂಪಾಯಿ ಆ ಫಂಡು ಸೇರಿತೆಂದು ತರ್ಕಿಸಿದೆ. ಗಾಂಧೀ ಮಹಿಮೆಯಿಂದ ತಾಯಿಗೆ ಗುಣವಾಯಿತು ಎಂದು ನಂಬುವಷ್ಟು ಮೂಢ ನಾನಲ್ಲ. ಆದರೂ ಆ ತರಳ ನಯಸ್ಸಿನಲ್ಲಿ ಗಾಂಧೀ ನನ್ನ ಮನಸ್ಸಿನಲ್ಲಿ ಸ್ಥಿರವಾಗಿ ಮೂಡಿಬಿಟ್ಟ. ಆನಂತರ ಹಿರಿಯರು ಶಹರಿಗೆ ಹೋಗಿ ಬಂದಾಗ ಗಾಂಧೀಜಿಯನ್ನು ಕುರಿತು ಕೆಲವೊಮ್ಮೆ ಮಾತು ಏಳುತ್ತಿತ್ತು. ಹೆಚ್ಚಾಗಿ ನೀದಾತ್ಮಕ ಚರ್ಚೆ. ಗಾಂಧಿ ಹೊಲೆಯರನ್ನೂ ಬ್ರಾಹ್ಮಣರನ್ನೂ ಒಂದು ಮಾಡಬೇಕೆನ್ನುತ್ತಾರೆ. ಈ ದೇಶಕ್ಕೆ ಶಾಂತಿ ಸಮಾಧಾನಗಳನ್ನು ಕೊಟ್ಟು ಬ್ರಿಟೀಷ್ ಬಾದಶಹನನ್ನು ಓಡಿಸಬೇಕೆನ್ನುತ್ತಾರೆ. ಗಾಂಧಿ ಮಹಾತ್ಮನಲ್ಲ; ದುರಾತ್ಮ ಇತ್ಯಾದಿ. ಆದರೆ ನನ್ನ ಮನಸ್ಸಿನಲ್ಲಿ ಬಹುಶಃ ಅಹಮದಾಬಾದಿನ ಇಲ್ಲವೆ ಮುಂಬಾಯಿಯ ಯಾವದೋ ಗಿರಣಿಯಲ್ಲಿ ನೇಯಲ್ಪಟ್ಟದ್ದೆ. ಆ ಮಹಾತ್ಮ ಗಾಂಧಿ ಕೀ ಜೈ ಎಂಬ ಬಿಳಿಯ ಅಕ್ಷರಗಳ ಸಾಲುಗಳು ಹಾಗೆಯೆ ಅಚ್ಚೊತ್ತಿದ್ದವು. ಗಾಂಧೀಜಿಯನ್ನು ದ್ವೇಷಿಸುವುದು ನನಗೆ ಅಸಾಧ್ಯವಾಗಿ ಹೋಗಿತ್ತು.

ವರ್ಷಗಳೆ ಕಳೆದವು. ನಾನು ಶಹರಕ್ಕೆ ಬಂದೆ, ಹೈಸ್ಕೂಲು ಸೇರಿದೆ. ಗಾಂಧೀಜಿಯ ಸುದ್ದಿಗಳು ನಮ್ಮ ಕಿವಿಗೆ ಆಗಾಗ್ಗೆ ಬೀಳುತ್ತಿದ್ದವು. ಅವನ ಸತ್ಯನಿಷ್ಠೆಯು ಕತೆಯಾಗಿ ಹಬ್ಬಿತ್ತು. ನಮ್ಮ ಮನೆಯ ವಾತಾವರಣದಲ್ಲಿ ಗಾಂಧಿ ವಿರೋಧವೇ ಇನ್ನೂ ಇದ್ದರೂ ಹೇಗೋ ಏನೋ ನನ್ನ ಹೃದಯದಲ್ಲಿ ಆತನ ಬಗ್ಗೆ ಸಾವಕಾಶವಾಗಿ ಆದರ ಹೆಚ್ಚುತ್ತಾ ಹೋಯಿತು.

ಬಂತು ಉಪ್ಪಿನ ಸತ್ಯಾಗ್ರಹ. ಒಂದು ದಿನ ಬೀದಿಯಲ್ಲಿ ಹೊರಟಿದ್ದ ಮೆರವಣಿಗೆಯಲ್ಲಿ ಸಿಕ್ಕಿಕೊಂಡ ನನಗೆ ಶಾಲೆ ಸೇರುವುದು ತಡವಾಯಿತು. ಮಾಸ್ತರರು ನನ್ನನ್ನು ಹೊರಗೆ ನಿಲ್ಲಿಸದರು. ಹೀಗೆ ರಾಜದ್ರೋಹಿಗಳ ಸಂಗಡ ಸೇರಿಕೊಂಡರೆ ನನ್ನ ಸ್ಕಾಲರ್‌ಶಿಪ್ ರದ್ದು ಮಾಡುವುದಾಗಿ ಹೆದರಿಸಿದರು. ಹೀಗೆ ಅನಾಯಾಸವಾಗಿ ನಾನು ರಾಜದ್ರೋಹಿ, ದೇಶಭಕ್ತ ಪದವಿಗೆ ತೇರ್ಗಡೆ ಹೊಂದಿದ್ದೆ. ನನಗೆ ಹೆದರಿಕೆಯೂ ಆಯಿತು, ಗೋಪ್ಯವಾಗಿ ಒಂದಿಷ್ಟು ಹರ್ಷಪುಳಕವೂ ಆಯಿತು.

ಆದರೆ ವರ್ಷ ಕಳೆಯುವುದರೊಳಗೆ ವಾತಾವರಣದಲ್ಲಿ ಸಾವಕಾಶ

ಬದಲಾವಣೆಯಾಗಿದ್ದನ್ನು ನಾನು ಗಮನಿಸಿದೆ. ನಮ್ಮ ಸಂಬಂಧಿಕರಲ್ಲಿಯೇ ಒಬ್ಬರು ಖಾದಿಯಲ್ಲದಿದ್ದರೂ ಸ್ವದೇಶಿ ಬಟ್ಟೆಯ ಪ್ರತಿಜ್ಞೆತೊಟ್ಟಿದ್ದರು. ಮದ್ರಾಸ್ ಮಲ್ಲಿಗೆ ಶರಣು ಹೊಡೆದು ಕೃಷ್ಣರಾಜೇಂದ್ರ ಗಿರಣಿಯ ಧೋತರವನ್ನು ಉಡತೊಡಗಿದರು. ಅಸ್ಪೃಶ್ಯತಾ ನಿವಾರಣೆಯೊಂದು ಹೊರತು ಗಾಂಧಿ ಹೇಳುವುದೆ ನಿಜ, ಎಂದು ಅವರ ಅಭಿಪ್ರಾಯವಾಗಿತ್ತು. ಮದ್ರಾಸ್ ಮಲ್ಲಿನ ಬದಲು ಕೃಷ್ಣರಾಜೇಂದ್ರ ಧೋತರ, ಅಸ್ಪೃಶ್ಯತಾ ನಿವಾರಣೆ ಹೊರತು ಗಾಂಧೀಪಕ್ಷ – ಅರ್ಥರಹಿತ ಬದಲಾವಣೆ ಎಂದು ಅನಿಸಬಹುದು. ಆದರೆ ಗಾಂಧಿಯ ಪ್ರಭಾವ ಕೆಲಸ ಮಾಡಿದ್ದೇ ಹಾಗೆ. ಒಬ್ಬರಲ್ಲಿ ಆ ಬದಲಾವಣೆ, ಇನ್ನೊಬ್ಬರಲ್ಲಿ ಈ ಪರಿವರ್ತನೆ, ಒಬ್ಬರಲ್ಲಿ ಒಂದು, ಒಬ್ಬರಲ್ಲಿ ಅರ್ಧ. ಒಟ್ಟು ಪರಿಣಾಮ ಬ್ರಿಟೀಷ್ ಸಾಮ್ರಾಜ್ಯದ ತಳವನ್ನು ಅಲುಗಿಸಲು ಸಾಕಾಯಿತು.

ಶಾಲೆಗಳಲ್ಲೂ ಹಾಗೆಯೆ. ಅನೇಕ ಉಪಾಧ್ಯಾಯರಲ್ಲಿ ವ್ಯಕ್ತವಾಗಿ ಪರಿವರ್ತನೆ ಕಾಣಿಸುತ್ತಿತ್ತು. ಒಬ್ಬರು ಇನ್‌ಸ್ಪೆಕ್ಷನ್ ದಿನ ಹೊರತು ಬೇರೆ ದಿನಗಳಲ್ಲಿ ಗಾಂಧಿ ಟೋಪಿಯೊಡನೆ ಶಾಲೆಗೆ ಬರುತ್ತಿದ್ದಾರೆ. ಇನ್ನೊಬ್ಬರು ಒಳಗೆ ಖಾದಿ ಶರ್ಟು ಹಾಕಿ ಮೇಲೆ ಮಿಲ್‌ಮೇಡ್ ಕೋಟು ಧರಿಸುತ್ತಿದ್ದಾರೆ. ಆ ವರ್ಷ ನಮಗೆ ಇಂಗ್ಲೀಷ್ ಉಪಪಠ್ಯ Socrates in an Indian Village ಎಂಬ ನಿವೃತ್ತ ಬ್ರಿಟೀಷ್ ಅಧಿಕಾರಿ ಬರೆದ ಪುಸ್ತಕ. ಅದು ಭಾರತೀಯರ ಅಜ್ಞಾನ ಅಂಧಶ್ರದ್ಧೆಗಳನ್ನು ನಗೆಗೀಡು ಮಾಡುವಂತಾಥಾದ್ದು. ಅದನ್ನು ಪಾಠ ಹೇಳುವ ಉಪಾಧ್ಯಾಯರು ಅದರ ಪ್ರತಿ ಅಧ್ಯಾಯವನ್ನು ಖಂಡಿಸುತ್ತ ಹೋಗುತ್ತಾರೆ. ನಮ್ಮ ಇತಿಹಾಸಧ್ಯಾಪಕರು ಕಲ್ಕತ್ತೆಯ ಕತ್ತಲ ಕೋಣೆಯ ಪ್ರಸಂಗವನ್ನು ಪಾಠ ಹೇಳುವಾಗ ಅದು ಬ್ರಿಟೀಷ್ ಪ್ರಚಾರಕರ ಕರಾಳ ಕಲ್ಪನೆ ಎಂದು ಈಚೆಗಿನ ಸಂಶೋಧನೆಗಳ ವಿವರ ಕೊಡುತ್ತಾರೆ. ಇನ್‌ಸ್ಪೆಕ್ಷನ್ ದಿನ ಬರುತ್ತದೆ. ಅಂದು ಎಲ್ಲ ಹುಡುಗರ ತಲೆ ಮೇಲೆ ಎಂದೂ ಇಲ್ಲದ ಗಾಂಧೀ ಟೋಪಿ. ನನ್ನ ಹತ್ತಿರ ಯಾವ ಟೋಪಿಯೂ ಇಲ್ಲ. ಆದರೆ ನನ್ನ ಹತ್ತಿರದ ಹುಡುಗ ತನ್ನ ಜೇಬಿನಿಂದ ಒಂದು ಬಿಳಿ ಟೋಪಿ ತೆಗೆದು ನನ್ನ ತಲೆಮೇಲಿಡುತ್ತಾನೆ. ಮೊದಲನೇ ಇಂಗ್ಲೀಷ್ ಪೀರಿಯಡ್ಡಿಗೆ ಹೆಡ್ಮಾಸ್ತರೇ ಬರುತ್ತಾರೆ. "ಏನ್ರೋ! ನನ್ನ ಹೆಂಡತಿ ಮಕ್ಕಳ ಅನ್ನವನ್ನು ತೆಗಯಬೇಕಂತ ಮಾಡಿದ್ದೀರಾ? ಈವೊಂದು ದಿನ ಟೋಪ್ಪಿಗೆಗಳನ್ನು ತೆಗೆದಿಡಿ, ನಾಳೆ ಬೇಕಾದರೆ ನಾಮಾ ಹಾಕಿಕೊಳ್ಳುತ್ತೇನೆ" ಎನ್ನುವರು. ಹಿಂದಿನಂತೆ ಆರೋಪವಿಲ್ಲ; ಸ್ಕಾಲರ್‌ಶಿಪ್ ರದ್ದುಗೊಳಿಸುವ ಬಿಭೀಷಿಕೆ ಇಲ್ಲ. ಹುಡುಗರೆಲ್ಲ "ತೆಗೆದಿಡೋಲ್ಲ!" ಎಂದು ಕೂಗುತ್ತಾರೆ. ಹೆಡ್ಮಾಸ್ತರರ ಮುಖ ಅರಳುತ್ತದೆ. ಹೊರಹೋಗುತ್ತಾರೆ. ಇನ್‌ಸ್ಪೆಕ್ಟರರು ಬರುತ್ತಾರೆ. ಬಿಳಿ ಕಿರೀಟವನ್ನು ನೋಡುತ್ತಾರೆ. ಏನನ್ನೂ ಹೇಳುವುದಿಲ್ಲ. ಬಹುಶಃ ಅವರಿಗೂ ಒಳಗೆ

ಸಂತೋಷವೇ ಆಗಿದೆ. ಇದು ಗಾಂಧೀಜಿಯ ಕೆಲಸ. ಹೀಗೆಮಾಡಿ ಎಂದು ಆತ ನಮಗಾಗಲಿ ಉಪಾಧ್ಯಾಯರಿಗಾಗಲಿ ಹೇಳಿಲ್ಲ. ನಮ್ಮ ಒಳಗಿನ ದೇಶಾಭಿಮಾನದ ಕಿಡಿ ಕೆದರಿದವನು ಗಾಂಧಿ ಇರಲಿಕ್ಕಿಲ್ಲ. ಅದನ್ನು ಮಾಡಿದವರು ಅವನಿಗಿಂತ ಮುಂಚೆಯೇ ಆಗಿಹೋಗಿದ್ದರೆ. ಆದರೆ ಗಾಂಧಿ ಮಾತ್ರವೇ ನಮ್ಮೊಳಗಿನ ಹೆದರಿಕೆಯನ್ನು ಹತ್ತು ಶತಮಾನಗಳ ಪರಾಧೀನತೆಯಲ್ಲಿ ಭಾರತೀಯ ಆತ್ಮವನ್ನು ಹೊಕ್ಕು, ಹಾಸುಹೊಕ್ಕಾದ ಅಂಜುಬುರುಕುತನವನ್ನು ಹೊಡೆದೋಡಿಸಿದವನು. ಅವನ ಕಾರ್ಯಪದ್ಧತಿ ಗುಟ್ಟನ್ನೂ ಅದರೊಡನೆ ಅನಿವಾರ್ಯವಾಗಿ ಬರುವ ಭಯವನ್ನೂ ಅನಾವಶ್ಯಕವಾಗಿ ಮಾಡಿದೆ. ಅದು ಅವನ ವಿಶೇಷ. ಅವನು ಹೇಡಿತನದ ಅಗತ್ಯವೇ ಉಳಿಯದಂತೆ ಮಾಡಿದ್ದಾನೆ. ಅವನಿಗೆ ಅವನ ಭಾರತ ಗೊತ್ತು. ಅವನಿಗೆ ಅವನ ಎದುರಾಳಿ ಬ್ರಿಟನ್ ಗೊತ್ತು. ಅಭಯಂ ನೋ ಅಸ್ತು!

ವರ್ಷ ಸುತ್ತುತ್ತದೆ. ನನ್ನ ಶಾಲೆ ಮುಗಿಯುತ್ತದೆ. ಗಾಂಧಿಯ ಹರಿಜನ ಉಪವಾಸ ಆಗುತ್ತದೆ. ನನಗೆ ಇದೆಲ್ಲ ಮಸುಕು ಮಸುಕಾಗಿ ಮಾತ್ರ ಅರ್ಥವಾಗುತ್ತದೆ. ಅನಂತರ ಹರಿಜನ ಚಳವಳಿಯೇ ಪ್ರಾರಂಭವಾಗುತ್ತದೆ. ಸ್ಥಳೀಯ ಕಾಂಗ್ರೆಸ್ ಮುಂದಾಳುಗಳು ಊರ ಮಧ್ಯದಲ್ಲಿಯೇ, ಸನಾತನಿಗಳ ಕೋಟೆಯಲ್ಲೇ ಅಸ್ಪೃಶ್ಯತೆಯನ್ನು ಖಂಡಿಸಿ ದಿನವೂ ಭಾಷಣ ಮಾಡುತ್ತಾರೆ. ಅವನು ಅಬದ್ಧವಾಗಿಯೇ ಆದರೂ ಸಂಸ್ಕೃತ ಶ್ಲೋಕ ಹೇಳಿ ತನ್ನ ಜಾತಿಗೆ ಮೇಲ್ಜಾತಿಯವರಷ್ಟೇ ಹಕ್ಕಿದೆಯೆಂದು ತೊದಲು ತೊದಲಾಗಿ ಭಾಷಣ ಮಾಡುತ್ತಾನೆ. ಆ ಕಾಲದಲ್ಲಾದರೆ ಇವನ ಎಲುಬು ಉಳಿಯುವುದು ಸಾಧ್ಯವಿರಲಿಲ್ಲ. ಒಂದೆರಡು ಸಲ ಭಾಷಣಕಾರರೊಡನೆ ವಾಕ್ಯಾರ್ಥ ಮಾಡಲು ಒಬ್ಬಿಬ್ಬ ಸನಾತನಿಗಳು ಬರುತ್ತಾರೆ, ಅವರ ತರ್ಕಶಕ್ತಿಯು ಮುಂದೆ ಗಾಂಧೀವಾದಿಗಳು ನಿರುತ್ತರರಾಗುತ್ತಾರೆ. ಆದರೆ ಅದರಿಂದ ಯಾರಿಗೂ ಏನೂ ಮನವರಿಕೆಯಾಗುವುದಿಲ್ಲ. ಸನಾತನಿಗಳ ವಾದ ನೂರುಸಲ ಗೆದ್ದರೇನು, ಅಸ್ಪೃಶ್ಯತೆಯ ಮಾನಸಿಕ ಕೋಟೆ ಗಾಂಧಿ ಉಪವಾಸದೊಡನೆ ಕುಸಿದು ಬಿದ್ದಿತು. ಇನ್ನುಳಿದುದು ಬೀದಿ ಕಾಳಗಗಳು ಮಾತ್ರ. ಆ ಕಾಳಗಗಳು ಇನ್ನೂ ನಡೆದಿವೆ. ಯುದ್ಧ ಆಗಲೇ ಗೆದ್ದಾಗಿತ್ತು ನೈತಿಕ ಯುದ್ಧ.

ನನ್ನ ಹೃದಯದಲ್ಲಿದ್ದ ಅಸ್ಪೃಶ್ಯತೆಯ ಕೋಟೆಯೂ ಕುಸಿಯುವುದರ ಅನುಭವ ನನಗೆ ಆಗಲೇ ಆಯಿತು. ನಾನೂ ಸನಾತನಿ ಕುಲದವ. ಹೊಲೆಯರನ್ನು ಮುಟ್ಟಿದರೆ ಜನಿವಾರ ಬದಲಿಸುತ್ತಿದ್ದವ. ಆದರೆ ಅಂದಿನಿಂದ ಹೊಲೆಯರನ್ನು ಮುಟ್ಟಿಸಿಕೊಂಡಾಗ ನನ್ನೊಳಗಿಂದ ಪವಿತ್ರವಾದದ್ದೇನೋ ಹೋಗುತ್ತಿದೆಎಂಬ ಭಾವನೆ ಎಂದೂ ತಲೆಯೆತ್ತಲಿಲ್ಲ. ನಾನು ಅಸ್ಪೃಶ್ಯರನ್ನು ಮುಟ್ಟುತ್ತೇನೆ, ಅವರೊಡನೆ

ಕೂರುತ್ತೇನೆ, ಉಣ್ಣುತ್ತೇನೆ, ಕುಡಿಯುತ್ತೇನೆಎಂಬುದನ್ನು ನನ್ನ ಹಿರಿಯರಿಂದ ಕೂಡ ಮರೆಮಾಚಲು ನಾನು ಯತ್ನಿಸಲಿಲ್ಲ.

ಅದಾಗಿ ಕೆಲ ಸಮಯದಲ್ಲೇ ನಾನು "ಸತ್ಯ ಶೋಧನೆ"ಯನ್ನು ಓದಿದ್ದು, ನನಗೆ ನಿನಪಿದ್ದಾಗಿನಿಂದಲೂ ದೈವಭಕ್ತಿ ನನ್ನಲ್ಲಿ ಬಲವಾಗಿರಲಿಲ್ಲ. ಗಾಂಧೀಜಿವನಿಯನ್ನೋದಿಯೂ ಅದು ಬಲಗೊಳಲಿಲ್ಲ. ಆದರೆ ಆತನ ಪರಿಪೂರ್ಣ ಸತ್ಯನಿಷ್ಠೆ ಆಳವಾಗಿ ನನ್ನ ಹೃದಯವನ್ನು ತಟ್ಟಿತು. ಉಳಿದೆಲ್ಲಕ್ಕೂ ಪ್ರಮಾಣ ಬೇಕು. ಸತ್ಯಕ್ಕೆ, ಸತ್ಯದ ಅವಶ್ಯಕತೆಗೆ ಮಾತ್ರ ಬಾಹ್ಯ ಪ್ರಮಾಣ ಬೇಕಿಲ್ಲ. ಅದು ಸ್ವಯಂವೇದ್ಯವಾದದ್ದು ಈ ಮನುಷ್ಯನ ಹತ್ತಿರ ಅದು ಪೂರ್ಣ ಪರಿಮಾಣದಲ್ಲಿದೆ. ಆದ್ದರಿಂದ ಆತ ಮಹಾತ್ಮ. ಆದರೆ ಈತನು ಹಾಗಾಗಬೇಕು. ಆ ಸಮಯದಲ್ಲಿ ಸ್ಪಷ್ಟವಾಗಿ ಹೀಗೆ ಯೋಚಿಸಿ ನಿರ್ಧರಿಸಿದೆನೆಂದಲ್ಲ, ಆದರೆ ಸುಮಾರಾಗಿ ಹೀಗೆ ಅವನಿಗೆ ಪ್ರತೀತಿ ಆಗಿರಬೇಕು. ಅದು ವಿಚಾರ ಮಾರ್ಗದಿಂದ ಬಂದ ಪ್ರತೀತಿ ಅಲ್ಲ, ನೇರವಾಗಿ ಬಂದದ್ದು. ಆಧ್ಯಾತ್ಮವಾದಿಗಳು ಅಪರೋಕ್ಷ ಜ್ಞಾನ ಎನ್ನುತ್ತಾರಲ್ಲ, ಆ ಬಗೆಯದು. ಪ್ರತ್ಯಕ್ಷಕ್ಕಿಂತಲೂ ನೇರವಾದ ಪ್ರತೀತಿ ಅದು. ಆದ್ದರಿಂದ ಅದರ ಪ್ರಭಾವ ಹೆಚ್ಚು ಗಹನವಾದದ್ದು.

ನನ್ನ ಬುದ್ಧಿಯೋ? ಅದೆಂದೂ ಗಾಂಧೀಜಿಯ ಸಂಗಡ ಹೆಜ್ಜೆ ಇಡಲಿಲ್ಲ. ಎಂ.ಎನ್. ರಾಯರು ಬಂಧಮುಕ್ತರಾಗಿ ಮದರ್ ಇಂಡಿಯಾ ಪ್ರಾರಂಭಿಸಿದಾಗ ಅದನ್ನೋದುತ್ತಾ ಅವರ ವಿಚಾರಗಳಿಗೆ ನಾನು ಮಾರುಹೋಗಿದ್ದೆ. ಈಗಲೂ ರಾಯ್ ಮಹಾಗಹನ ಚಿಂತಕನೆಂದು ನಾನು ಭಾವಿಸುತ್ತೇನೆ. ಸುಭಾಷ್‌ಚಂದ್ರ ಬೋಸರ ವಿದ್ಯುತ್ಕಾಂತ ವ್ಯಕ್ತಿತ್ವವೂ ನನ್ನನ್ನು ಸೆಳೆದಿತ್ತು. ೧೯೪೧ರಲ್ಲಿ ಹಿಟ್ಲರನು ಸಮಾಜವಾದಿ ರಶಿಯವನ್ನು ಯುದ್ಧದಲ್ಲಿ ಎಳೆದಾಗ ನನಗೆ ಬಂದ ಕೋಪ ಅಷ್ಟಿಷ್ಟಲ್ಲ. ಆದರೆ ಗಾಂಧೀಜಿ ನನ್ನ ಹೃದಯದ ಮೇಲೆ ಪ್ರಭುತ್ವ ಸ್ಥಾಪಿಸಿದ್ದರು.

ಗಾಂಧಿಗೆ ಸಂಬಂಧಪಟ್ಟದೆಲ್ಲವೂ ನನ್ನ ಮೇಲೊಂದು ವಿಲಕ್ಷಣ ಅಧಿಕಾರವನ್ನು ಹೊಂದಿದಂತೆ ತೋರುತ್ತಿತ್ತು. ಮಹಾದೇವಭಾಯಿ ಸತ್ತ ಸುದ್ದಿ ಬಂದ ದಿನ ನನ್ನ ತಲೆಯೇ ತಾಳದಲ್ಲಿ ಉಳಿಯಲಿಲ್ಲ. ನಾನು ಅತ್ತುಬಿಟ್ಟೆ. ಈ ಬ್ರಿಟೀಷರು ಗಾಂಧಿಯ ಹತ್ತಿರದವರೊಬ್ಬರನ್ನೇ ವಿಷಹಾಕಿ ಕೊಂದು ಕೊನೆಗೆ ಗಾಂಧಿಯನ್ನೂ ಮುಗಿಸುತ್ತಾರೆ, ಎಂದುಕೊಂಡೆ. ಮಹಾದೇವ ದೇಸಾಯಿಯವರನ್ನು ಬ್ರಿಟೀಷರೆ ಕೊಂದರೆಂಬುದರಲ್ಲಿ ಆಗ ನನಗೆ ಎಳ್ಳಷ್ಟು ಸಂದೇಹವಿರಲಿಲ್ಲ. ಕಸ್ತುರ ಬಾ ನಿಧನ ಮತ್ತೆ ನನ್ನ ಕುಶಂಕೆಗಳನ್ನು ಎಬ್ಬಿಸಿತು. ಆ ಮೇಲೆ ಗಾಂಧೀಜಿಯ ಉಪವಾಸವೇ ಬಂತು. ಆಗ ನಾನೊಂದು ಪತ್ರಿಕಾ ಕಛೇರಿಯಲ್ಲಿ ದುಡಿಯುತ್ತಿದ್ದೆ. ಗಳಿಗೆ ಗಳಿಗೆಗೆ ಮಹಾತ್ಮನ ಪಕೃತಿ ಕೆಡುತ್ತಿರುವ ವಾರ್ತೆಗಳು ಬರುತ್ತಿದ್ದವು. ಹದಿಮೂರನೇ ದಿನ ಅವರ ಜೀವ ತೀವ್ರ

ಗಂಡಾಂತರದಲ್ಲಿರುವ ವಾರ್ತೆ ಬಂತು. ಅಕಟಕಟಾ! ಈತ ಸಾಯುತಾನೆ. ಏನು ಮಾಡುವಾ! ನನ್ನ ಮುಂದೆ ಬಂದು ಕುಳಿತ ಸುದ್ದಿಗಳನ್ನು ಭಾಷಾಂತರಿಸುವಷ್ಟು ಸ್ತಿಮಿತ ಕೂಡ ನನ್ನ ಮನಸಿನಲ್ಲಿರಲಿಲ್ಲ.

ಯುದ್ಧ ಮುಗಿಯಿತು. ಸ್ವರಾಜ್ಯ ಬಂತು. ದೇಶ ಇಬ್ಭಾಗವೂ ಆಯಿತು. ಜನರ ಹತ್ಯೆ ಲೆಕ್ಕವಿಲ್ಲದಷ್ಟಾಯಿತು. ಈ ಸಂಧಿಯಲ್ಲಿ ನನ್ನ ಹಾಗೆ ಹಲವರ ರೋಷ ಗಾಂಧೀಜಿಯ ಮೇಲೆ ತಿರುಗಿರಬೇಕು. ಪ್ರೀತಿ ವಿಚಿತ್ರ ವಸ್ತು. ಅದು ದ್ವೇಷವಾಗಿ ಪರಿವರ್ತನೆ ಹೊಂದಲು ಬಹಳ ಕಾಲ ಹಿಡಿಯುವುದಿಲ್ಲ. ಪ್ರಯೋಗಶಾಲೆಯಲ್ಲಿ ಲಿಟ್ಮಸ್ ಕಾಗದದ ಬಣ್ಣ ಕೆಟ್ಟಿದೆ. ನಮ್ಮವರನ್ನು ಎಡಬಿಡದೆ ಕೊಲ್ಲುವವರನ್ನು ಕಾಯಲು ಈತ ಹೆಣಗುತ್ತಾನೆ. ಜಾತೀಯ ಸೌಹಾರ್ದಕ್ಕಾಗಿ, ಪಾಕಿಸ್ತಾನಕ್ಕೆ ೫೦ ಕೋಟಿ ರೂಪಾಯಿ ಕೊಡಿಸುವುದಕ್ಕಾಗಿ, ಗಾಂಧೀಜಿ ಅಮರಣ ಉಪವಾಸ ಕೈಗೊಂಡದ್ದು ಒಂಟೆಯ ಬೆನ್ನು ಮುರಿದು ಕೊನೆಯ ಹುಲ್ಲುಕಡ್ಡಿಯಂತಾಯಿತು. ಇಲ್ಲ, ಈ ಗಾಂಧಿ ಹೋಗಬೇಕು. ಅವನು ಸಾಯದೇ ಈ ದೇಶ ಬದುಕಲಾರದು. ಈತ ಏಕೆ ಸಾಯುವುದಿಲ್ಲ ಎಂದು ಹಲ್ಲು ಕಡಿಕಡಿದು ಹೇಳುತ್ತಿದ್ದೆ...

ಮತ್ತೆ ೧೯೪೮ರ ಜನವರಿ ೩೦ರಂದು ಸಂಜೆ ಗಾಂಧೀಜಿಗೆ ಗುಂಡು ಹಾಕಿದ ವಾರ್ತೆ ಬಂತು. ಮುಂದೆ ಹದಿನೈದು ನಿಮಿಷದಲ್ಲಿ, ಮರಣ ವಾರ್ತೆಯೆ ಬಂತು. ನನ್ನ ಮನಸ್ಸಿಗೆ ಆಗ ಅನಿಸಿದ್ದು ಶಬ್ದಗಳಲ್ಲಿ ಹೇಳುವುದು ಸಾಧ್ಯವೇ ಇಲ್ಲ. ನಾನು ಸ್ತಂಭಿತನೇ ಆಗಿ ಹೋಗಿದ್ದೆ. ರಾತ್ರಿ ಮನೆಗೆ ಹೋದವನು ಒಂದು ಗುಟುಕು ನೀರನ್ನೂ ಕುಡಿಯಲಿಲ್ಲ.

ಲಿಟ್ಮಸ್ ಕಾಗದದ ಬಣ್ಣ ಪುನಃ ಪೂರ್ತಿ ಬದಲಾಗಿ ಹೋಗಿತ್ತು. ಹಾಸಿಗೆಯ ಮೇಲೆ ಮಲಗಿದೆ. ಹುಚ್ಚುಹುಚ್ಚು ಯೋಚನೆಗಳು ಮುತ್ತಿಗೆ ಹಾಕಿದವು. ನನ್ನ ಹೆಂಡತಿ ಹಣೆಮುಟ್ಟಿ ನೋಡಿದಳು. ಜ್ವರ ಕಾಯುತ್ತಿದೆ ಎಂದಳು. ಬರಲಿ, ಬರಲಿ, ನಾನು ಗಾಂಧಿಯನ್ನು ಕೊಂದಿದ್ದೇನೆ ಬಾರದಿದ್ದೀತೆ? ಎಂದುಕೊಂಡೆ. ಮರಳಿ ಮರಳಿ ಅದೇ ವಿಚಾರ. ನಾನು ಗಾಂಧಿ ಸಾಯಬೇಕು ಎಂದು ಬಯಸಿದೆ. ಅದಕ್ಕೆ ಗಾಂಧಿಯನ್ನು ಕೊಂದರು. ನನ್ನಂತೆ ಎಷ್ಟು ಜನ ಮೂಢಾತ್ಮರು ಅವನ ಸಾವನ್ನು ಹಾರೈಸಿದರೋ ಏನೋ. ಈ ಹಾರೈಕೆಗಳ ತೂಕವೆಲ್ಲ ಸಾಲಲಿಲ್ಲ. ಕಡೆಗೆ ನಾನೂ ಹಾರೈಸಿದೆ. ಸರಿ. ನನ್ನೊಂದು ಹಾರೈಕೆ ಕಡಿಮೆ ಬಿದ್ದಿತ್ತು. ನನ್ನ ಶಾಪ ಬಂದದ್ದೇ ತಡ, ತಕ್ಕಡಿಯ ತೊಲೆ ಇತ್ತ ಒಲೆದಿತ್ತು. ದೇವರು, 'ಹಾಗಾದರೆ ಆಗಲಿ' ಎಂದು ಕೊಲೆಗಡುಕನನ್ನು ಕಳಿಸಿದ. ನಾನೊಬ್ಬ ಶಪಿಸದೆ ಉಳಿದಿದ್ದರೆ ಗಾಂಧಿ ಬದುಕಬಹುದಾಗಿತ್ತು. ನಾನೇ ಗಾಂಧಿಯನ್ನು ಕೊಂದೆ ಎಂದು ಜ್ವರಗ್ರಸ್ತ ಮಿದುಳು ಒಂದೇ ಸಮನೆ ಅರಚಿಕೊಳ್ಳುತ್ತಿತ್ತು.

ಕಣ್ಣಲ್ಲೇ ಬೆಳಗಾಯಿತು. ಜ್ವರ ಹಾಗೇ ಇತ್ತು. ಬೆಳಗಿನಿಂದ ರೇಡಿಯೋ ಸ್ಮಶಾನ ಯಾತ್ರೆಯ ವ್ಯವಸ್ಥೆಗಳನ್ನು ಬಿತ್ತರಿಸುತ್ತಿತ್ತು. ನಾನೂ ಅಂದೂ ಏನೂ ತಿನ್ನಲಿಲ್ಲ. ಜ್ವರ ಹಾಗೇ ಇತ್ತು. ಸಂಜೆ ಸ್ಮಶಾನಯಾತ್ರೆಯ ಸುದ್ಧಿ ಬಿತ್ತರಣೆ ಆರಂಭವಾಯಿತು. ಗಾಂಧೀಜಿಯನ್ನು ಸುಟ್ಟರು, ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ್ , ರಘುಪತಿ ರಾಘವ... ಈ ರಾಮ ಭಜನೆಯಲ್ಲಿ ಕರುಣವಾದದ್ದೇನಿದೆಯೋ ನಾನರಿಯೆ. ಆ ಭಜನೆಯ ಧ್ವನಿ ಕೇಳಿದ್ದೆ ತಡ, ಕಟ್ಟು ಒಡೆದು ಹೋಯಿತು. ನಾನು ಬಿಕ್ಕಿ ಬಿಕ್ಕಿ ಅಳತೊಡಗಿದೆ. ನನ್ನ ಹಣೆಯ ಮೇಲೆ ಕೈಯಿಟ್ಟು ಕುಳಿತಿದ್ದ ನನ್ನ ಹೆಂಡತಿ ಚಕಿತಳಾಗಿ ನನ್ನನ್ನೇ ದಿಟ್ಟಿಸತೊಡಗಿದಳು. "ಗಾಂಧಿ ಹೋಗಿಬಿಟ್ಟ, ಅವನನ್ನು ಸುಟ್ಟುಬಿಟ್ಟರು. ಅಯ್ಯೋ! ಇನ್ನೇನುಳಿಯಿತು!" ಎಂದು ಹಲುಬಿದೆ.

ಅದೇ ಕೆಲ ತಿಂಗಳ ಹಿಂದೆ ನನ್ನ ಗಂಡು ಮಗುವೊಂದು ಸತ್ತಿತ್ತು. ನನ್ನ ಹೆಂಡತಿ ಅದನ್ನು ನೆನೆದುಕೊಂಡು, "ನಮ್ಮ ಮಗು ಸತ್ತಾಗ ಅಳಲಿಲ್ಲ, ಈತ ಯಾರೋ ಏನೋ ಸತ್ತ ಅಂತ ಹೀಗೆ ಜ್ವರ ಬರಿಸಿಕೊಂಡು ಅಳುತ್ತೀರಲ್ಲ" ಎಂದು ಕೂದಲು ನೇವರಿಸುತ್ತ ಹೇಳಿದಳು. ಅವಳಿಗೆ ತಿಳಿಹೇಳುವುದು ಹೇಗೆ? ಗಾಂಧಿ ನನಗೇನಾಗಬೇಕೆಂದು ಅವಳನ್ನುವುದು ನಿಜ. ಬಹಳ ಹಿಂದೆ; ನಾನು ಎಷ್ಟೋ ಸಾವುಗಳನ್ನು ಕಂಡಿದ್ದೇನೆ. ಅಂಗುಲಂಗುಲವಾಗಿ ಜೀವ ಪ್ರವಾಹ ಇಳಿಯುವುದನ್ನು ನೋಡಿದ್ದೇನೆ. ನಾನು ಅತ್ತದ್ದು ಅಪರೂಪ. ಈಗೇಕೆ ಅಳುತ್ತಿದ್ದೇನೆಂದು ಅವಳಿಗೆ ಹೇಗೆ ತಿಳಿಹೇಳಲಿ? ನಾನು ತಂದೆಯನ್ನು ಕೊಂದ ಈಡಿಪಸ್; ಅದಕ್ಕೇ ಅಳುತ್ತಿದ್ದೇನೆ ಎನ್ನಲೇ? ಈತ ದೇಶಕ್ಕೆ ಏನಾಗಬೇಕು ಎಂದು ವಿವರಿಸಲೇ? "ನಿನಗೆ ತಿಳಿಯದು, ನಿನಗೆ ತಿಳಿಯದು" ಎಂದಷ್ಟೇ ಹೇಳಿ ಮತ್ತೆ ಅಳತೊಡಗಿದೆ... ಸರಿ ಸರಿ! ನೀನು ಗಾಂಧಿಯನ್ನು ಬಹಳ ಪ್ರೀತಿಸಿದ್ದೆ. ಆದರೆ ಏನುಉಪಯೋಗ? ಗಾಂಧಿಯಿಂದ ನೀನೇನು ಕಲಿತೆ? ಜೀವನವನ್ನು ಅವನ ಬೆಳಕಿನಲ್ಲಿ ಹೇಗೆ ಬದಲಾಯಿಸಿಕೊಂಡೆ? ಏನು ತ್ಯಾಗ ಮಾಡಿದೆ? ಸೆರೆಮನೆಗೆ ಹೋದೆಯಾ? ನೌಕರಿ ಬಿಟ್ಟೆಯಾ? ಹಳ್ಳಿಗೆ ಹೋದೆಯಾ? ಚರಕ ತಿರುಗಿಸಿದೆಯಾ? ಏನು ಮಾಡಿದೆ ಎಂದು ನೀವು ಕೇಳುತ್ತೀರಿ. ನಿಜ, ನೂಲಲಿಲ್ಲ. ಖಾದಿ ಕೂಡ ಹಾಕುವುದಿಲ್ಲ. ಸೆರೆಮನೆಗೆ ಹೋಗಲಿಲ್ಲ. ೧೯೪೨ರಲ್ಲಿ ಸ್ವಲ್ಪದರಲ್ಲಿ ತಪ್ಪಿತು. ಆದರೂ ಸೆರೆಮನೆಗೆ ಹೋಗಲೆಂದೇ ನಾನೇನೂ ಮಾಡಲಿಲ್ಲವೆಂದೊಪ್ಪುತ್ತೇನೆ. ತ್ಯಾಗ ಮಾಡಲು ನನ್ನ ಹತ್ತಿರ ಹೆಚ್ಚೇನೂ ಇಲ್ಲ. ನೌಕರಿ ಬಿಡಲು ನಾನು ಸರಕಾರಿ ನೌಕರಿಯಲ್ಲಿರಲೇ ಇಲ್ಲ.

ಏನೂ ಮಾಡಲಿಲ್ಲ. ನಾನು ಧರ್ಮರಾಯನಾಗಲಿಲ್ಲ; ಹರಿಶ್ಚಂದ್ರನಾಗಲಿಲ್ಲ. ಶಿಬಿ ಚಕ್ರವರ್ತಿಯಾಗಲಿಲ್ಲ. ಆದರೆ ನಾನು ಬಾಲ್ಯದಿಂದ

ಹೇಗೆ ಬದಲಾಗುತ್ತ ಬಂದೆ ನನ್ನ ಸುತ್ತಲೂ ಗಾಂಧಿಯಿಂದ ಏನು ಬದಲಾವಣೆ ಆಯಿತು ಎಂದು ಹೇಳಿದ್ದೇನೆ. ನನ್ನ ಸುತ್ತಲಿದ್ದವರಲ್ಲಾದ ಬದಲಾವಣೆಯೇ ನನ್ನಲ್ಲಾದರೆ ನನ್ನದೇನು ವಿಶೇಷ ಎನ್ನಬೇಡಿ. ನೀವೂ ನಾನೂ ಹೆಚ್ಚಿನವರೆಲ್ಲರೂ ಸಾಮಾನ್ಯರು. ನಮ್ಮೆಲ್ಲರ ಚೇತನಗಳೂ ಗಿಂಡಿಗಳು, ಗುಡಾಣಗಳಲ್ಲ. ಎಲ್ಲವುಗಳಲ್ಲೂ ಹಿಡಿಯುವುದು ಅಷ್ಟಷ್ಟೇ. ಆದರೆ ಗಿಂಡಿ ತುಂಬಿದ್ದು ಸುಳ್ಳೆ?

ಮತ್ತೂ ಹೇಳುತ್ತೇನೆ ಕೇಳಿ – ಇದು ಹೆಚ್ಚು ಮುಖ್ಯವಾದುದ್ದು. ನನ್ನ ತಪ್ಪನ್ನು ಪರರ ಹೆಗಲಿಗೆ ಹೊರಿಸಿ ಪಾರಾಗಬೇಕೆನಿಸಿದಾಗ ಒಳಗಿನಿಂದ ಯಾರೋ ನನ್ನನ್ನು ಬೆರಳಿಂದ ತಿವಿದಂತಾಗುತ್ತದೆ. ಅದು ಗಾಂಧಿ, "ಹಿಮಾಲಯ ಪ್ರಮಾದ"ವನ್ನು ಒಪ್ಪಿಕೊಂಡ ಗಾಂಧಿ. ಪರರಿಗೆ ಸಿಗಬೇಕಾದದ್ದನ್ನು ಎತ್ತಿ ಹಾಕುವ ಆಸೆ ಬಂದಾಗ ಹಿಂದೆ ಜಗ್ಗಿದ ಹಾಗಾಗುತ್ತದೆ. ಅದು ಗಾಂಧಿ. ಸುಳ್ಳು ಹೇಳಲು ಪ್ರಾರಂಭಿಸಿದಾಗ, ನಾಲಿಗೆ ತಡೆಯುತ್ತದೆ; ಸತ್ಯಶೋಧಕ ಗಾಂಧಿ ನರಸುಕ್ಕ ಹಾಕಲು ಯತ್ನಿಸುತ್ತಿರುತ್ತಾನೆ. ಯಾರನ್ನಾದರೂ ಕೊಲ್ಲಬೇಕೆಂಬಷ್ಟು ದ್ವೇಷ ಹುಟ್ಟಿದರೆ, ಗಾಂಧಿ ಸವಾಖಾಲಿಗೆ ಹೋದದ್ದು ನೆನಪಾಗುತ್ತದೆ. ಇನ್ನೂ ಅಸಂಖ್ಯ ದುಷ್ಕರ್ಮಗಳಿಗೆ ಕೈ ಎತ್ತಿದಾಗ ಗಾಂಧಿ ಬ್ರೇಕ್ ಹಾಕುತ್ತಾನೆ. ಪ್ರತಿಸಲವೂ ಗಾಂಧಿ ಗೆಲ್ಲುತ್ತಾನೆ, ನಾನು ಗಾಂಧೀಮರಿಯಾಗುತ್ತೇನೆ ಎಂದಲ್ಲ. ಆದರೆ ಎಷ್ಟೋ ಸಲ ಆತ ಗೆಲ್ಲುತಾನೆ. ಗಾಂಧಿಯಿಂದಾಗಿ ನಾನು ಬಹಳ ಅನ್ಯಾಯುವಾದದ್ದನ್ನು, ಅನೃತವಾದದ್ದನ್ನು ಮಾಡುವ ಚಪಲದಿಂದ ಪಾರಾಗಿದ್ದೇನೆಂಬುದು ನಿಜ.

ಏನು ಮಹಾ ಎನ್ನುತ್ತೀರಾ? ಗಾಂಧಿಯ ಸುದ್ದಿಯನ್ನೂ ಅರಿಯದ ಎಷ್ಟೋ ಜನ ಸಂಭಾವಿತರಾಗಿದ್ದಾರೆ! ಸತ್ಯ. ಆದರೆ ನನ್ನನ್ನು ನೀವು ಅರಿತಿಲ್ಲ, ನಾನು ಪ್ರಕೃತಿಯಿಂದ ಎಂಥ ಸ್ವಾರ್ಥಿ, ನಿರ್ಘೃನ ಎಂದು ನಿಮಗೆ ಗೊತ್ತಿಲ್ಲ. ನಾನು ಇಂದಿಗೂ ಸ್ವಾರ್ಥಿಯಾಗಿದ್ದೇನೆ. ಆದರೆ ಗಾಂಧಿ ನನ್ನನ್ನು ಸ್ವಾರ್ಥಸಾಧಕನಾಗಗೊಟ್ಟಿಲ್ಲ. ನಿರ್ಘೃನನಾಗಿಯೇ ಉಳಿದಿದ್ದೇನೆ. ಆದರೆ ಗಾಂಧಿಯಿಂದ ನಾನು ಕ್ರೂರನಾಗುವುದು ತಪ್ಪಿದೆ. ಹೇಡಿಯಾಗಿಯೆ ಇದ್ದೇನೆ. ಆದರೆ ಅಲ್ಪನಾದಂತೆ ಗಾಂಧಿ ನೋಡಿಕೊಂಡಿದ್ದಾನೆ.

ಮತ್ತೆ ಮಹಾತ್ಮರಾದವರು ಅದಕ್ಕಿಂತ ಹೆಚ್ಚೇನು ಮಾಡಬಲ್ಲರು? ಅವರು ನಮ್ಮನ್ನು ಸ್ವಲ್ಪ ಕಡಿಮೆ ಕೆಟ್ಟವರಾಗಿ ಸ್ವಲ್ಪ ಹೆಚ್ಚು ಒಳ್ಳೆಯವರಾಗಿ ಮಾಡಬಲ್ಲರಷ್ಟೇ. ಬರೇ ಸ್ವಲ್ಪ. ರವಷ್ಟು ಕಡಿಮೆ. ಅಲ್ಪರಾಗಿ ಎಳ್ಳಷ್ಟು ಹೆಚ್ಚು ಉದಾರರಾಗಿ ಮಾಡಬಲ್ಲರಷ್ಟೇ. ಬರೇ ರವಷ್ಟು. ಆದರೆ ಈ ಲೇಶ ಅಂತರವೇ ಅಲ್ಲವೆ, ಪತಿತ ಅ–ಪತಿತಿರ ನಡುವೆ ಇರುವುದು?

– ಪಾ. ವೆಂ. ಆಚಾರ್ಯ

(ಕಸ್ತೂರಿ ಸಾಭಾರ)

ಗಾಂಧಿಯೊಂದಿಗೆ ಮೊದಲ ಮತ್ತು ಕಡೆಯ ಭೇಟಿ

–ಓಶೋ

ಒಮ್ಮೆ ಗಾಂಧೀ ಪ್ರಯಾಣಿಸುತ್ತಿದ್ದ ರೈಲು ನಮ್ಮ ಊರಿನ ನಿಲ್ದಾಣವನ್ನೂ ಹಾದುಹೋಗಲಿದೆ ಹಾಗೆಯೇ ನಿಲ್ದಾಣದಲ್ಲಿ ಕೆಲಹೊತ್ತು ನಿಲ್ಲಲಿದೆ ಎಂಬ ಸುದ್ದಿ ಬಂದಿತು. ಆಗ ನಾನಿನ್ನೂ ಹತ್ತು ವರ್ಷದ ಹುಡುಗ. ಆಗ ಬೇಸಗೆ; ಅದರಲ್ಲೂ ಮಧ್ಯೆ ಭಾರತದ ಬಿಸಿಲು ಅಸಾಧ್ಯವಾದುದು. ನನ್ನ ಅಜ್ಜಿ ನನಗಾಗಿ ಬಿಳಿ ಬಣ್ಣದ ತೆಳುವಾದ ಕುರ್ತಾ ಹಾಗು ಪಂಚೆಗಳನ್ನು ಸಿದ್ಧಗೊಳಿಸಿ, ನನ್ನ ಜೇಬಿನಲ್ಲಿ ಮೂರು ರೂಪಾಯಿಗಳ ಬೆಳ್ಳಿನಾಣ್ಯಗಳನ್ನು ಇರಿಸಿ ಗಾಂಧಿಯನ್ನು ನೋಡಿಕೊಂಡು ಬರಲು ಕಳಿಸಿದ್ದಳು. ಆ ಕಾಲಕ್ಕೆ ಮೂರು ರೂಪಾಯಿಯಲ್ಲಿ ಒಂದು ವಾರ ಜೀವನ ನಡೆಸಬಹುದಾಗಿತ್ತು. ರೈಲ್ವೇ ನಿಲ್ದಾಣದಲ್ಲಿ ತುಂಬ ಜನ ಗಾಂಧಿಯನ್ನು ನೋಡಲು ನೆರೆದಿದ್ದರು. ಪುಟ್ಟ ಹುಡುಗ ಗಾಂಧೀಜಿಯನ್ನು ನೋಡಲು ಬಹುದೂರದಿಂದ ಒಬ್ಬನೇ ಬಂದಿದ್ದಾನೆ ಎಂದು ಅವರು ತಾವು ತಂದಿದ್ದ ತಿಂಡಿ ಊಟಗಳನ್ನೆ ನನಗೂ ಕೊಡುತ್ತಿದ್ದರು. ಹಾಗಾಗಿ ಅಜ್ಜಿ ಕೊಟ್ಟಿದ್ದ ಮೂರು ರೂಪಾಯಿಗಳು ಜೇಬಿನಲ್ಲಿ ಹಾಗೇ ಉಳಿದುಕೊಂಡವು.

ಯಥಾಪ್ರಕಾರ ರೈಲು ಹದಿಮೂರು ಗಂಟೆಗಳ ಕಾಲ ತಡವಾಗಿ ಬಂದಿತು. ಅವರು ಸದಾ ಮೂರನೆಯ ದರ್ಜೆಯ ಬೋಗಿಯಲ್ಲೇ ಪ್ರಯಾಣಿಸುತ್ತಿದ್ದರು. ಆದರೆ ಗಾಂಧೀಜಿಯ 'ಮೂರನೆಯ ದರ್ಜೆ' ಎಂಥದು ಎಂದು ನೀವು ಯಾರೂ ಕಲ್ಪಿಸಿಕೊಳ್ಳಲಾರಿರಿ. ಅದು ಮೊದಲ ತರಗತಿಯ ಬೋಗಿಗಿಂತ ಉತ್ತಮವಾದುದು. ಅರವತ್ತು ಜನ ಹಿಡಿಸುವ ಬೋಗಿಯಲ್ಲಿ ಬರೀ ಗಾಂಧೀ, ಅವರ ಪತ್ನಿ ಹಾಗು ಅವರ ಕಾರ್ಯದರ್ಶಿ ಈ ಮೂವರು ಮಾತ್ರ ಪ್ರಯಾಣಿಸುತ್ತಿದ್ದರು. ಗಾಂಧೀ ತತ್ವವನ್ನು ಉಳಿಸಲು ಆ ಬೋಗಿಗೆ ಹೆಸರಿಗೆ ಮಾತ್ರ 'ಮೂರನೆಯ ದರ್ಜೆ' ಎಂಬ ಫಲಕ ಇರುತ್ತಿತ್ತು.

ಗಾಂಧಿಯನ್ನು ನೋಡಲು ಕಾಯುತ್ತಿದ್ದ ಎಲ್ಲರೂ ಹೊರಟು ಹೋಗಿದ್ದರು. ನನ್ನ ಹಟ ಎಂಥದೆಂದು ನೀವೆಲ್ಲ ಬಲ್ಲಿರಿ. ಇಡೀ ರೈಲ್ವೇ ಪ್ಲಾಟ್ ಫಾರಂನಲ್ಲಿ ನಾನು ಹಾಗು ಸ್ಟೇಷನ್ ಮಾಸ್ಟರ್ ಇಬ್ಬರೇ ಉಳಿದಿದ್ದುದು. ರೈಲು ಪ್ಲಾಟ್ ಫಾರಂಗೆ ಬಂದು ನಿಂತ ಕೂಡಲೆ ಆ ಸ್ಟೇಷನ್ ಮಾಸ್ಟರ್ ಗಾಂಧಿಯನ್ನು ನನಗೆ ಪರಿಚಯ ಮಾಡಿಸಿದರು. 'ಬಾಪು, ಇವನು ಸಾಮಾನ್ಯ

ಹುಡುಗ ಎಂದು ಭಾವಿಸಬೇಡಿ. ಹದಿಮೂರು ಗಂಟೆಗಳಿಂದ ಒಂದೇ ಕಡೆ ಕುಳಿತು ನಿಮಗಾಗಿ ಕಾಯುತ್ತಿದ್ದಾನೆ. ಎಲ್ಲರೂ ಹೊರಟು ಹೋದರೂ ಇವನು ಮಾತ್ರ ಕದಲಿಲ್ಲ. ಇಲ್ಲೇ ಕುಳಿತು ದಿನಗಟ್ಟಲೆ ಕಾಯಲು ಕೂಡ ಸಿದ್ಧನಾಗಿದ್ದ' ಎಂದ. ಆಗ ಗಾಂಧೀ – ಆಗಲೇ ಅವರಿಗೆ ತುಂಬ ವಯಸ್ಸಾಗಿತ್ತು – ನನ್ನನ್ನು ಪ್ರೀತಿಯಿಂದ ಹತ್ತಿರ ಕರೆದರು. ಆದರೆ ಅವರ ಕಣ್ಣುಗಳು ನನ್ನ ಕಡೆ ನೋಡದೆ ನನ್ನ ಜೇಬಿನಲ್ಲಿದ್ದ ನಾಣ್ಯಗಳ ಕಡೆಗೆ ನೆಟ್ಟಿದ್ದವು. ಆ ಕ್ಷಣವೇ ನನ್ನ ಮನಸ್ಸಿನಲ್ಲಿದ್ದ ಗಾಂಧೀಜಿಯ ಚಿತ್ರ ಸಂಪೂರ್ಣವಾಗಿ ಅಳಿಸಿಹೋಯಿತು.

'ಜೇಬಿನಲ್ಲಿ ಏನಿದೆ?' ಎಂದು ಕೇಳಿದರು. 'ಮೂರು ರೂಪಾಯಿಗಳು' ಎಂದೆ, ತಮ್ಮ ಬಳಿ ಸದಾ ಇಟ್ಟುಕೊಂಡಿರುತ್ತಿದ್ದ ಹುಂಡಿಯನ್ನು ನನ್ನ ಮುಂದೆ ಹಿಡಿದು 'ಅವನ್ನು ಇಲ್ಲಿ ದಾನ ಮಾಡು' ಎಂದರು. ನನಗೆ ಸದ್ಯ ಹಣವನ್ನು ಖರ್ಚುಮಾಡಿರಲಿಲ್ಲವಲ್ಲ ಎಂದು ಸಮಾಧಾನವಾಯಿತಾದರೂ 'ಈ ಹಣವನ್ನು ಏಕೆ ಕೇಳುತ್ತಿರುವಿರಿ' ಎಂದು ಕೇಳದೆ ಇರಲಿಲ್ಲ. ಅವರು 'ಬಡವರಿಗೋಸ್ಕರ' ಎಂದು ಹೇಳಿದರು 'ಹಾಗಿದ್ದರೆ ಸರಿ' ಎಂದು ಹೇಳಿ ನಾನು ನನ್ನ ಬಳಿ ಇದ್ದ ಎಲ್ಲ ನಾಣ್ಯಗಳನ್ನೂ ಹಾಕಿದೆ.

ಅವರು ನನ್ನ ಇತ್ಯೋಪರಿಗಳನ್ನು ವಿಚಾರಿಸಿದರು. ಹೊರಡುವ ಮುನ್ನ ನಾನು ಕೂಡಲೆ ಮುಂದೆ ಹೋಗಿ ಅವರ ಸಮೀಪದಲ್ಲಿದ್ದ ಆ ಹುಂಡಿಯನ್ನು ತೆಗೆದುಕೊಂಡೆ. ಆಗ ಗಾಂಧೀಜಿ ಗಾಬರಿಯಿಂದ 'ಅಯ್ಯೋ, ಅದು ಬಡವರ ಹಣ' ಎಂದರು. 'ಅದು ನನಗೆ ಗೊತ್ತು, ಆದರೆ ನಮ್ಮ ಹಳ್ಳಿಯಲ್ಲೂ ತುಂಬ ಜನ ಬಡವರಿದ್ದಾರೆ. ಹಾಗಾಗಿ ಇದರ ಬೀಗದ ಕೈಯನ್ನೂ ಕೊಡಿ. ಇಲ್ಲವಾದರೆ ಇದನ್ನು ತೆಗೆಯಲು ಕಳ್ಳನನ್ನು ಹುಡುಕಿಕೊಂಡು ಅಲೆಯಬೇಕಾಗುತ್ತದೆ' ಎಂದೆ. 'ಇದು ನಿಜಕ್ಕೂ ವಿಚಿತ್ರ' ಎನ್ನುತ್ತ ಗಾಂಧಿ ತಮ್ಮ ಕಾರ್ಯದರ್ಶಿಯತ್ತ ನೋಡಿದರು. ಅವನಿಗೂ ಏನು ಹೇಳಬೇಕೆಂದು ತೋಚಲಿಲ್ಲ. ಆಮೇಲೆ ಕಸ್ತೂರಿ ಬಾ ಅವರ ಕಡೆಗೆ ನೋಡಿದರು 'ನಿನಗೆ ಸರಿಯಾದವನೇ ಸಿಕ್ಕಿದ್ದಾನೆ. ಇಷ್ಟು ದಿನ ನೀನು ಎಲ್ಲರಿಗೂ ಮಂಕುಬೂದಿ ಎರಚುತ್ತಿದ್ದೆ, ಈಗ ಇವನು ನಿನ್ನ ಹುಂಡಿಯನ್ನೇ ಎಗರಿಸಿದ್ದಾನೆ' ಎಂದು ಹೇಳಿ ಆಮೇಲೆ ನನ್ನತ್ತ ನೋಡಿ 'ಒಳ್ಳೆಯದು ಮಗು ಅದನ್ನು ನೀನೇ ತೆಗೆದುಕೊಂಡು ಹೋಗು. ನನಗೂ ಇಪ್ಪತ್ತನಾಲ್ಕು ಗಂಟೆಗಳ ಕಾಲ ಇವರ ಮಗ್ಗುಲಲ್ಲೇ ಹೆಂಡತಿಗಿಂತ ಹೆಚ್ಚಾಗಿ ಕುಳಿತುಕೊಳ್ಳುವ ಈ ಹುಂಡಿಯನ್ನು ನೋಡಿ ನೋಡಿ ಸಾಕಾಗಿದೆ' ಎಂದರು.

ಆಗ ಗಾಂಧಿಯ ಮುಖವನ್ನು ನೋಡಿದ ನನಗೆ ಈತನೇ ನಿಜವಾದ ಬಡವನಂತೆ ಕಾಣಿಸುತ್ತಾನೆ ಎನ್ನಿಸಿ 'ಇಲ್ಲ, ಇದನ್ನು ನೀವೇ ಇಟ್ಟುಕೊಳ್ಳಿ'ಎಂದು

ಹಿಂದಿರುಗಿಸಿದೆ. ಗಾಂಧೀ ತಮ್ಮ ಬಳಿ ಇಂದು ಕಿತ್ತಳೆ ಹಣ್ಣನ್ನು ಕೊಡಲು ಬಂದರು. ಆದೆರ ನಾನು ತೆಗೆದುಕೊಳ್ಳಲಿಲ್ಲ. ಒಂದು ಕಿತ್ತಳೆಹಣ್ಣಿಗೆ ಮೂರು ಬೆಳ್ಳಿ ನಾಣ್ಯಗಳು ತುಂಬಾ ದುಬಾರಿ ಎನಿಸಿ ರೈಲಿನಿಂದ ಕೆಳಗಿಳಿದೆ.

'ಇವರ ಕಾರ್ಯದಶಿಗೆ ಒಂದಿಷ್ಟೂ ಸಮಯಪ್ರಜ್ಞೆ ಇಲ್ಲ, ಇವರ ಹೆಂಡತಿಗೂ ಇವರ ಮುಖ ನೋಡಿ ಒಂದಿಷ್ಟೂ ಕರುಣೆ ಹುಟ್ಟಿದಂತೆ ಕಾಣಿಸುತ್ತಿಲ್ಲ ಹಾಗಾಗಿ ನನ್ನ ಕಣ್ಣಿಗೆ ಈತನೇ ನಿಜವಾದ ಬಡವನಂತೆ ಕಾಣಿಸುತ್ತಾನೆ. ಒಬ್ಬ ನಿಜವಾದ ಮಹಾತ್ಮನನ್ನು ನೋಡಲೆಂದು ಇಷ್ಟು ದೂರ ಬಂದೆ. ಆದರೆ ಇಲ್ಲಿ ಒಬ್ಬ ನಿಜವಾದ ಬನಿಯಾನ ದರ್ಶನವಾಯಿತು' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ ಅಲ್ಲೇ ನಿತ್ತಿದ್ದೆ.

ರೈಲು ಹೊರಟರೂ ಗಾಂಧೀ ಕಿಟಕಿಯಿಂದ ಇಣುಕಿ ನನ್ನನ್ನೇ ನೋಡುತ್ತಿದ್ದರು. ಆ ವಯಸ್ಸಿನಲ್ಲಿ ನನಗೆ ಗಾಂಧೀ ಒಬ್ಬ ಶುದ್ಧ ವ್ಯಾಪಾರಿಯ ಹಾಗೆ ಕಂಡರು. ಅಂದಿನಿಂದ ಅವರ ಯಾವ ವಿಚಾರಗಳನ್ನೂ ಒಪ್ಪಲು ನನಗೆ ಸಾಧ್ಯವೇ ಆಗಿಲ್ಲ. ಆ ಪ್ರಸಂಗ ನನ್ನಲ್ಲಿ ಎಂತಹ ಕಹಿ ಅನುಭವವನ್ನು ಉಳಿಸಿತೆಂದರೆ, ಅಂದಿನಿಂದ ಗಾಂಧಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಂತೆಲ್ಲ ಆ ಮೊದಲ ಅನುಭವ ನನ್ನಲ್ಲಿ ಹುಟ್ಟಿಸಿದ ಭಾವನೆ ಇನ್ನೂ ದೃಢವಾಗುತ್ತಲೇ ಹೋಯಿತು. ಆಳದಲ್ಲಿ ಗಾಂದಿಯ ಕುರಿತು ನನ್ನ ಎಲ್ಲ ವಿಚಾರಗಳನ್ನೂ ಆ ಘಟನೆ ಸದಾ ನಿಯಂತ್ರಿಸುತ್ತಿತ್ತು.

ಸ್ವತಂತ್ರ್ಯ ಹೋರಾಟ ಕಾಲದಲ್ಲಿ ನಮ್ಮ ಮನೆ ಎಲ್ಲ ಪಿತೂರಿಗಳ ಕೇಂದ್ರವಾಗಿತ್ತು. ಕೆಲವು ಭೂಗತ ಕ್ರಾತಿಕಾರಿಗಳು ನಮ್ಮ ಮನೆಯಲ್ಲೇ ವಾರಗಟ್ಟಲೆ ಬಿಡಾರ ಹೂಡುತ್ತಿದ್ದರು. ಪ್ರಸಿದ್ಧ ಕ್ರಾತಿಕಾರಿ, ಸಮಾಜವಾದೀ ಪಕ್ಷದ ಹಿರಿಯ ನಾಯಕ ಭವಾನಿ ಪ್ರಸಾದ್ ತಿವಾರಿ ತಲೆ ಮರೆಸಿಕೊಳ್ಳಬೇಕಾದಾಗಲೆಲ್ಲ ನಡುರಾತ್ರಿಯಲ್ಲಿ ನಮ್ಮ ಮನೆಗೆ ಬಂದುಬಿಡುತ್ತಿದ್ದ. ನನ್ನ ಇಬ್ಬರು ಚಿಕ್ಕಪ್ಪಂದಿರು ಜೈಲಿಗೆ ಹೋಗಿ ಬಂದಿದ್ದು ಪ್ರತಿ ವಾರ ಪೊಲೀಸ್ ಠಾಣೆಗೆ ಹೋಗಿ ಸಹಿ ಹಾಕಿ ಬರುತ್ತಿದ್ದರು. ಪುಲೀಸರ ಅನುಮತಿ ಇಲ್ಲದೆ ಊರು ಬಿಟ್ಟು ಹೊರಗೆ ಹೋಗುವಂತಿರಲಿಲ್ಲ. ನಮ್ಮ ಎಲ್ಲ ಸಂಕಟಗಳಿಗೂ ಬ್ರಿಟೀಷರೆ ನೇರ ಹೊಣೆ ಎಂದು ದೃಢವಾಗಿ ನಂಬಿಕೊಂಡು, ಸ್ವಾತಂತ್ರ್ಯದೊಡನೆ ಸ್ವರ್ಗವೇ ನಮಗೆ ಸಿಕ್ಕು ಬಿಡುತ್ತದೆ ಎನ್ನುವಂತೆ ವರ್ತಿಸುತ್ತಿದ್ದ ಇವರನ್ನೆಲ್ಲ ನೋಡಿ ನನಗೆ ನಗು ಬರುತ್ತಿತ್ತು.

ಬ್ರಿಟೀಷರು ತೊಲಗುವುದಕ್ಕೂ ಬಡತನ ನಿವಾರಣೆಗೂ ಎತ್ತಣಿಂದೆತ್ತ ಸಂಬಂಧ, ಅವರು ಬರುವ ಮುನ್ನ ನಮ್ಮ ದೇಶವೇನು ಬಡತನದಲ್ಲಿ

ಇರಲಿಲ್ಲವೇ? ಎಂದು ಕೇಳುತ್ತಿದೆ. ಹಾಗೊಂದು ವೇಳೆ ಬಡತನವನ್ನು ಹೇಗೆ ನಿವಾರಿಸುವಿರಿ. ಇಲ್ಲಿ ಬ್ರಿಟೀಷರ ಆಡಳಿತಕ್ಕೆ ಸಂಬಂಧವೇ ಇಲ್ಲದ ಸಾವಿರಾರು ಸಮಸ್ಯೆಗಳಿವೆಯಲ್ಲ, ಅವನ್ನೆಲ್ಲ ಹೇಗೆ ಪರಿಹರಿಸುವಿರಿ? ಹೆಂಡತಿಯ ಕಿರುಕುಳ ಅನುಭವಿಸುತ್ತಿರುವ ಗಂಡನ ಸಮಸ್ಯೆಗೆ ಪರಿಹಾರವೇನು? ಬ್ರಿಟೀಷರು ಹೋದರೂ ಹೆಂಡತಿ ಇದ್ದೇ ಇರುವಳಲ್ಲ! ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಿದ್ದೆ.

ನನ್ನ ಪ್ರಶ್ನೆಗಳಿಂದ ಅವರಿಗೆಲ್ಲ ಎಷ್ಟು ಮುಜುಗರವಾಗುತ್ತಿತ್ತೆಂದರೆ 'ನಿನ್ನ ಪ್ರಶ್ನೆಗಳನ್ನು ಎದುರಿಸುವುದಕ್ಕಿಂತ, ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಂಡು ರಾಜಕೀಯ ಖೈದಿಗಳಾಗಿ ಜೈಲುವಾಸ ಅನುಭವಿಸುವುದು ಎಷ್ಟೋ ಮೇಲು, ನೆಮ್ಮದಿಯಾಗಿ ಆದರೂ ಇರಬಹುದು' ಎನ್ನುತ್ತಿದ್ದರು. ಏಕೆಂದರೆ ರಾಜಕೀಯ ಖೈದಿಗೆ ಓದಲು ಪುಸ್ತಕಗಳನ್ನು ಕೊಡುತ್ತಾರೆ, ಕಠಿಣ ಶ್ರಮದ ಕೆಲಸ ಕೊಡುವುದಿಲ್ಲ. ಇಪ್ಪತ್ತನೇ ಶತಮಾನದ ಎಲ್ಲ ಆತ್ಮಕತೆಗಳೂ ಜೈಲುಗಳಲ್ಲೇ ರಚಿತವಾದುದು. ಕೆಲವೊಮ್ಮೆ ಅಂತಹ ಖೈದಿಗಳನ್ನು ಅರಮನೆಗಳಲ್ಲೂ ಇರಿಸುವುದುಂಟು. ಗಾಂಧೀ ಪೂನಾದ ಆಗಾಖಾನ್ ಅರಮನೆಯಲ್ಲಿ ಜೈಲುವಾಸ ಅನುಭವಿಸುತ್ತಿದ್ದರು, ಅದೂ ತಮ್ಮ ಹೆಂಡತಿಯೊಡನೆ! ಕಸ್ತೂರ್ ಬಾ ಸತ್ತದ್ದೂ ಆಗಾಖಾನ್ ಅರಮನೆಯಲ್ಲೇ, ಅವರ ಸಮಾಧಿಯೂ ಅಲ್ಲೆ ನಿರ್ಮಾಣವಾಗಿದೆ. ಆಗ ನಾನು ತಿವಾರಿಗೆ 'ಈ ಪ್ರಶ್ನೆಗಳನ್ನು ನಾನಲ್ಲದಿದ್ದರೆ ನಾಳೆ ಸ್ವಾತಂತ್ರ್ಯ ಬಂದ ಮೇಲೆ ನಿಮ್ಮ ಪ್ರಜೆಗಳೇ ಕೇಳುತ್ತಾರೆ, ಅವರಿಗೆ, ಏನು ಉತ್ತರ ಹೇಳುವಿರಿ' ಎನ್ನುತ್ತಿದ್ದೆ ತಿವಾರಿ 'ಮುದಲು ಸ್ವಾತಂತ್ರ್ಯ ಬರಲಿ, ನಿನ್ನ ಪ್ರಶ್ನೆಗಳಿಗೆ ತಾನಾಗಿಯೇ ಸಮಾಧಾನ ಸಿಗುತ್ತದೆ' ಎಂದು ಹೇಳುತ್ತಿದ್ದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಾಣು ಬ್ರಿಟೀಷರ ಪರವಾಗಿಯೇ ಇದ್ದೆ ಎಂದರೆ ನೀವು ನಂಬಲಾರಿರಿ. ವಿಜ್ಞಾನ, ತಂತ್ರಜ್ಞಾಣ, ಶಿಕ್ಷಣ, ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ರೈಲ್ವೇ, ರಸ್ತೆ, ಕಾರುಗಳು, ವಿಮಾನಗಳು ಇವೆಲ್ಲ ಭಾರತ್ತಕ್ಕೆ ಪಾದಾರ್ಪಣೆ ಮಾಡಿದ್ದೇ ಬ್ರಿಟೀಷರ ಆಡಳಿತಾವಧಿಯಲ್ಲಿ. ಚಿಕ್ಕವನಿದ್ದಾಗ ಬ್ರಿಟೀಷರ ಆಕ್ರಮಣ ನಡೆಯದೇ ಹೋಗಿದ್ದರೆ ನಮ್ಮ ದೇಶ ಈಗಲೂ ಇಥಿಯೋಪಿಯಾದ ತರಹವೇ ಇರುತ್ತಿತ್ತು ಎಂದು ವಾದಿಸುತ್ತಿದ್ದೆ.

ಬ್ರಿಟೀಷರು ಬರುವ ಮುನ್ನ ಗಂಡನನ್ನು ಕಳೆದುಕೊಂಡ ಹೆಣ್ಣುಮಕ್ಕಳನ್ನು ಚಿತೆಗೆ ಹಾಕಿ ಸುಡುತ್ತಿದ್ದರು. ಆದರೆ ಹೆಂಡತಿಯನ್ನು ಕಳೆದುಕೊಂಡವನನ್ನು...! ಧರ್ಮದ ಹೆಸರಿನಲ್ಲಿ ಹೀಗೆ ಗಂಡಸರು ಬದುಕಿನ ವಿಷಯದಲ್ಲಿ ಮಾತ್ರವಲ್ಲ ಸಾವಿನ ವಿಷಯದಲ್ಲೂ ಹೆಣ್ಣಿನ ಮೇಲಿನ ದಬ್ಬಾಳಿಕೆಯನ್ನು ಮುಂದುವರೆಸಿದ್ದರು. ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದ್ದ ಇಂಥ ಆಚರಣೆಯ

ಮೇಲೆ ಕಾನೂನಾತ್ಮಕ ನಿಷೇಧ'ಹೇರಿದ ಬ್ರಿಟೀಷರಿಗೆ ನಾವು ಆಭಾರಿಗಳಾಗಿರಬೇಡವೇ, ಇಂಥ ನೆಲವನ್ನು ಆಧ್ಯಾತ್ಮಿಕ ದೇಶ ಎನ್ನಬೇಕೇ?

'ಇದು ಧರ್ಮಭೂಮಿ, ಹಿಂದೆಲ್ಲ ಇಲ್ಲಿ ಮನೆಗಳಿಗೆ ಬೀಗಗಳನ್ನೇ ಹಾಕುತ್ತಿರಲಿಲ್ಲ' ಎಂದೆಲ್ಲ ಹೇಳುತ್ತಾರೆ. ನಿಜವೇನೆಂದರೆ ಇವರ ಮನೆಗಳಲ್ಲಿ ಒಡವೆಗಳೇ ಇರಲಿಲ್ಲ, ಅಲ್ಲದೆ ಆಗ ಇವರಿಗೆ ಬೀಗ ತಯಾರಿಸುವ ತಂತ್ರಜ್ಞಾನವೂ ತಿಳಿದಿರಲಿಲ್ಲ. ಇದು ಮಹಾ ಸೋಮಾರಿ ಹಾಗೂ ದರಿದ್ರರ ದೇಶ. ಈ ಜನ ಹಸಿದ ಹೊಟ್ಟೆಯಲ್ಲಿ ಮಲಗುವರೇ ವಿನಃ, ದುಡಿದು ಶ್ರೀಮಂತರಾಗುವ ಮನಸ್ಸು ಮಾಡುವವರಲ್ಲ. ಬ್ರಿಟೀಷರು ಬರುವ ಮುನ್ನ ಇಲ್ಲಿ ಒಬ್ಬೊಬ್ಬನೂ ಹತ್ತಿಪ್ಪತ್ತು ಮಕ್ಕಳನ್ನು ಹುಟ್ಟಿಸುತ್ತಿದ್ದ. ಹತ್ತರಲ್ಲಿ ಒಂದು ಮಗು ಉಳಿಯುತ್ತಿತ್ತು. ಬ್ರಿಟೀಷರೊಂದಿಗೆ ಇಲ್ಲಿ ವೈದ್ಯಕೀಯ ವಿಜ್ಞಾನ, ಆಧುನಿಕತೆಗಳು ಕಾಲಿಟ್ಟ ಮೇಲೆ ಹತ್ತರಲ್ಲಿ ಒಂದು ಮಗು ಮಾತ್ರ ಸಾಯುತ್ತಿತ್ತು.ಆ ಒಂದು ಮಗು ಕೂಡ ಇವರ ಮೌಢ್ಯದಿಂದಲೇ ಸಾಯುತ್ತಿದ್ದುದು.

ಗಾಂಧಿಯಂತಹವರು ಲಸಿಕೆಗಳನ್ನು, ಆಧುನಿಕ ಔಷಧಿಗಳನ್ನು ವಿರೋಧಿಸುತ್ತಿದ್ದರು. ಬ್ರಿಟಿಷರ ಮೂಲಕ ಈ ನೆಲವನ್ನು ಪ್ರವೇಶಿಸಿದ ಎಲ್ಲವನ್ನೂ, ಚರಕದ ಅನಂತರ ಆವಿಷ್ಕರಿಸಲಾದ ಪ್ರತಿಯೊಂದನ್ನೂ ವಿರೋಧಿಸುತ್ತಿದ್ದರು. ಬೈಬಲ್ಲಿನ ಮಾತುಗಳಲ್ಲಿ ಹೇಳುವುದಾದರೆ ಪರಮಪಿತರು ಆರನೆಯ ದಿನ ಚರಕ ಕಂಡಹಿಡಿದು ಸುಮ್ಮನಾದ. ಆಮೇಲೆ ಕಂಡುಹಿಡಿದ ಪ್ರತಿಯೊಂದೂ ಸೈತಾನನ ಅನ್ವೇಷಣೆಯೇ. ನಮ್ಮ ಹಳ್ಳಿಗಳಲ್ಲಿ ತಂಬಾಕು ಸೇದುವ ಜನ ಎರಡು ಬೆಣಚುಕಲ್ಲುಗಳನ್ನು ಇಟ್ಟುಕೊಂಡು ಓಡಾಡುತ್ತಿದ್ದುದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಕಲ್ಲನ್ನು ಉಜ್ಜಿ ಹತ್ತಿ ಇಟ್ಟು ಬೆಂಕಿ ತಯಾರಿಸಿಕೊಂಡು ಸೇದುತ್ತಿದ್ದರು ಈಗಲೂ ಅಲ್ಲಿ ಅಂತಹ ಜನ ಇರಬಹುದು. ನಾನು ನನ್ನ ಹಳ್ಳಿಗೆ ಕಾಲಿಟ್ಟು ತುಂಬ ವರ್ಷಗಳಾದವು.

೧೯೪೭ರಲ್ಲಿ ಸ್ವಾತಂತ್ರ್ಯ ಲಭಿಸಿತು. ನಮ್ಮ ಇಡೀ ಕುಟುಂಬ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿತ್ತು. ನಾನು ಜೈಲುವಾಸ ಅನುಭವಿಸದಿದ್ದರೂ ಹೋರಾಟದ ಬಿಸಿ ನನಗೂ ತಾಗದೇ ಇರಲಿಲ್ಲ. ನಮ್ಮ ಮನೆಯ ಗಂಡಸರನ್ನೆಲ್ಲ ಜೈಲುಗಳನ್ನು ತುಂಬಿಸಿದ್ದರಿಂದ ದುಡಿಯುವ ಗಂಡಸರಿಲ್ಲದೇ ಮನೆಯ ಹೆಂಗಸರು, ಮಕ್ಕಳ ಹೊಟ್ಟೆಪಾಡಿಗೂ ಗತಿ ಇಲ್ಲದಂತಾಗಿತ್ತು.

ಬ್ರಿಟಿಷರಿಗೆ ಭಾರತ ಒಂದು ಸಂಪತ್ತಿನ ಗಣಿಯಾಗಿತ್ತು. ಆದರೆ ತರುವಾಯ ಅವರಿಗೆ ಭಾರತ ಒಂದು ಹೊರೆಯಾಗಿ ಪರಿಣಮಿಸಿತು. ಹೀರಬೇಕಾದುದನ್ನೆಲ್ಲ ಅವರು ಹೀರಿ ಆಗಿತ್ತು. ಇಲ್ಲಿ ಅವರಿಗೆ ಇನ್ನೇನು ಕೆಲಸ? ಆಮೇಲೆ ಅವರಿಗೂ

ಇಲ್ಲಿಂದ ತೊಲಗಿದರೆ ಸಾಕು ಎನಿಸತೊಡಗಿತ್ತು. ಹಾಗೆ ನೋಡೆದರೆ ಕ್ವಿಟ್ ಇಂಡಿಯಾ ಚಳವಳಿ ೧೯೪೨ರಲ್ಲೇ ತೀವ್ರವಾಗಿ ಪ್ರಾರಂಭವಾಗಿತ್ತು. ಆ ಚಳವಳಿಯನ್ನು ಅವರು ಕೇವಲ ಒಂಬತ್ತು ದಿನಗಳಲ್ಲಿ ಹತ್ತಿಕ್ಕಿದ್ದರು. ಇದಾದ ಐದು ವರ್ಷಗಳ ನಂತರ ಅಂದರೆ ೧೯೪೭ರಲ್ಲಿ ಅವರು ತಾವಾಗಿಯೇ ಭಾರತವನ್ನು ಸ್ವತಂತ್ರಗೊಳಿದರು. ಏನಿದರ ಅರ್ಥ? 'ಇದು ನಿಮ್ಮ ಹೋರಾಟಕ್ಕೆ ಸಂದ ಜಯವೇ? ಐದುವರ್ಷಗಳ ಹಿಂದಿನ ನಿಮ್ಮ ಚಳವಳಿಗೂ, ಇಂದಿನ ಸ್ವಾತಂತ್ರ್ಯ ಪ್ರಾಪ್ತಿಗೂ ನನಗೆ ಯಾವ ತಾರ್ಕಿಕ ಸಂಬಂಧವೂ ಕಾಣಿಸುತ್ತಿಲ್ಲ' ಎಂದು ಅಪ್ಪನನ್ನು ಕೇಳುತ್ತಿದ್ದೆ. ಅಂದಿನ ಬ್ರಿಟನ್ ಪ್ರಧಾನಿ ರಿಚರ್ಡ್ ಆಟ್ಲೀ ಇಲ್ಲಿನ ವೈಸ್‌ರಾಯ್‌ಗೆ 'ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಅಲ್ಲಿಂದ ಬಂದುಬಿಡು. ೧೯೪೮ರ ಹೊತ್ತಿಗೆ ಯಾವ ಕಾರಣಕ್ಕೂ ನಾವು ಅಲ್ಲಿ ಇರಕೂಡದು' ಎಂದು ಸಂದೇಶ ಕಳುಹಿಸಿದ್ದನಂತೆ.

ದೇಶ ವಿಭಜನೆಯು ಸ್ವಾತಂತ್ರ್ಯದೊಂದಿಗೆ ನಮಗೆ ಬಂದ ಮೊದಲ ಬಳುವಳಿಯಾಗಿದೆ. ಸಾವಿರದ ನಾಲ್ಕು ನೂರು ವರ್ಷಗಳಿಂದ ಸಮಸ್ಯೆಯೇ ಇಲ್ಲದೆ ಒಂದಾಗಿ ಬದುಕುತ್ತಿದ್ದ ಮುಸ್ಲಿಮರಿಗೆ ಆಮೇಲೆ ಇದ್ದಕ್ಕಿದ್ದಂತೆ ತಾವು ಪ್ರತ್ಯೇಕರಾಗಬೇಕು ಎನಿಸಿಬಿಟ್ಟಿತು. ನಾನು ಚಿಕ್ಕವನಿದ್ದಾಗ ಎಷ್ಟೋ ಮುಸ್ಲಿಂ ಆಚರಣೆಗಳಲ್ಲಿ ಭಾಗವಹಿಸಿದ್ದೆ, ಅವರೂ ನಮ್ಮ ಮದುವೆ ಸಮಾರಂಭಗಳಿಗೆ ಬಂದು ನೆರವಾಗುತ್ತಿದ್ದರು. ಎಲ್ಲರೂ ಬ್ರಿಟಿಷರ ವಿರುದ್ಧ ಹೋರಾಡಬೇಕಾದ ಸಂದರ್ಭ ಇದ್ದುದರಿಂದ ಆಗ ಪರಸ್ಪರ ಕಿತ್ತಾಡುವ ಪ್ರಮೇಯವೇ ಇರಲಿಲ್ಲ. ಆದರೆ ಆಮೇಲೆ ಮುಸ್ಲಿಮರು 'ಸ್ವಾತಂತ್ರ್ಯ ಸಿಗದಿದ್ದರೂ ಚಿಂತೆಯಿಲ್ಲ, ಹಿಂದೂಗಳೊಂದಿಗೆ ಒಂದಾಗಿ ಬಾಳೆವು' ಎಂಬ ಕಠೋರ ತೀರ್ಮಾನಕ್ಕೆ ಬರಲು ಕಾರಣವಾದರೂ ಏನು?

ಇಲ್ಲಿ ನನಗೆ ಬ್ರಿಟಿಷರ ಎರಡು ತಪ್ಪುಗಳು ಕಾಣಿಸುತ್ತವೆ. ಮೊದಲನೆಯದಾಗಿ ಅವರು ಈ ದೇಶಕ್ಕೆ ಬಂದು ಆಡಳಿತ ಮಾಡಬಾರದಿತ್ತು. ಆಡಳಿತ ನಡೆಸಿದ ಮೇಲೆ ಹೊಣೆಗೇಡಿಗಳ ಹಾಗೆ ಇದ್ದಕ್ಕಿಂದ್ದಂತೆ ಇಲ್ಲಿಂದ ಪಲಾಯನ ಮಾಡಬಾರದಿತ್ತು. ಹಿಂದೂ ಮುಸ್ಲಿಮರು ಪರಸ್ಪರ ಕಾದಾಡದ ಹಾಗೆ ವಾತಾವರಣವನ್ನು ನಿರ್ಮಿಸಿಕೊಟ್ಟು ಬಳಿಕ ಇಲ್ಲಿಂದ ಕಾಲ್ತೆಗೆಯ ಬೇಕಾಗಿತ್ತು. ಅದು ಅವರಿಗೆ ಸಾಧ್ಯವೂ ಇತ್ತು, ಮಾತ್ರವಲ್ಲ, ಅವರ ಕರ್ತವ್ಯವೂ ಆಗಿತ್ತು. ಕೊನೆಕೊನೆಗೆ ಬ್ರಿಟಿಷರು ತುಂಬ ಬೇಕಾಬಿಟ್ಟಿಯಾಗಿ ನಡೆದುಕೊಂಡರು.

ಭಾರತದ ಸ್ವಾತಂತ್ರ್ಯವನ್ನು ನಿರ್ಧರಿಸಲೆಂದೇ ಮೌಂಟ್ ಬ್ಯಾಟನ್‌ನನ್ನು ಅಲ್ಲಿಂದ ಇಲ್ಲಿಗೆ ಕಳುಹಿಸಿದ್ದರು. ಅವನೇನು ಮುತ್ಸದ್ದಿಯೇ? ರಾಜಕೀಯದ

ಬಗ್ಗೆ ಏನೇನೂ ಗೊತ್ತಿಲ್ಲದ ಅವನು ಜೀವಮಾನವಿಡೀ ಉಡಾಫೆ ಮಾಡಿಕೊಂಡಿದ್ದವನು. ಅವನು ಇನ್ನೆಲ್ಲಿ ತಮ್ಮ ಹೆಂಡತಿಯರ ಮೇಲೆ ಕಣ್ಣಿಡುತ್ತಾನೋ ಎಂದು ಹೆದರಿ ಬ್ರಿಟನ್ನಿನ ರಾಜಕಾರಣಿಗಳು ಅವನನ್ನು ಇಲ್ಲಿಗೆ ಕಳುಹಿಸಿದ್ದು. ಮೊದಲು ಅವನು ಬರ್ಮಾದಲ್ಲಿದ್ದ, ಆಮೇಲೆ ಅವನಿಗೆ ವೈಸ್‌ರಾಯ್‌ನಂತಹ ದೊಡ್ಡ ಜವಾಬ್ದಾರಿಯನ್ನು ವಹಿಸಿ ಭಾರತಕ್ಕೆ ಕಳುಹಿಸಲಾಯಿತು. ಆಗ ನಾನು 'ಇದು ದೇಶವನ್ನು ಸ್ವತಂತ್ರ್ಯಗೊಳಿಸುವ ಸಮಯವಲ್ಲ, ದುಡುಕಬೇಡಿ' ಎಂದು ಮೌಂಟ್ ಬ್ಯಾಟನ್‌ಗೆ ಪತ್ರವನ್ನು ಬರೆದಿದ್ದೆ.

ಮುಂದೆ ೧೯೪೮ರ ಜನವರಿ ೩೦ರಂದು ಮಹಾತ್ಮಾ ಗಾಂಧೀಜಿ ಹತ್ಯೆಯಾದರು. ಆಗ ನನಗೆ ಹದಿನೆಂಟರ ವಯಸ್ಸು. ಅವರನ್ನು ಗುಂಡಿಟ್ಟು ಕೊಂದ ದಿನ ಕಣ್ಣೀರಿಡುತ್ತ ಕುಳಿತಿದ್ದ ನನ್ನನ್ನು ಕಂಡು ನನ್ನ ತಂದೆ 'ನೀನು ಗಾಂಧಿಗಾಗಿ ಅಳುವುದೇ?' ಎಂದು ಅಚ್ಚರಿ ಪಟ್ಟರು.

ಆಗ ನಾನು 'ಅಪ್ಪ, ಕಣ್ಣೀರಿಡುವುದು ಮಾತ್ರವಲ್ಲ, ಅವರ ಅಂತ್ಯ ಸಂಸ್ಕಾರದಲ್ಲೂ ಭಾಗವಹಿಸಬೇಕು. ಈಗ ಮಾತನಾಡುತ್ತ ಕೂರಲು ಸಮಯವಲ್ಲ, ರೈಲು ಟಿಕೀಟಿಗೆ ಹಣ ಕೊಡು. ಇನ್ನೇನು ದೆಹಲಿಯ ರೈಲು ಹೊರಡಲಿದೆ' ಎಂದು ಕೇಳಿದೆ.

'ನನಗೆ ನಂಬಿಕೆ ಬರುತ್ತಿಲ್ಲ, ನಿನಗೇನಾದರೂ ತಲೆ ಕೆಟ್ಟಿದೆಯೇ?' ಎಂದು ಕೇಳಿದರು.

'ಅದಕ್ಕೆಲ್ಲ ಈಗ ಪುರುಸೊತ್ತಿಲ್ಲ. ಅಲ್ಲಿಂದ ಬಂದ ಮೇಲೆ ಉತ್ತರಿಸುತ್ತೇನೆ. ಈಗ ಹಣ ಕೊಡು' ಎಂದೆ.

ನೀವು ನಂಬಲಾರಿರಿ ನಾನು ದೆಹಲಿಯ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ನನ್ನ ಅಧ್ಯಾತ್ಮ ಗುರು, ಸಂಗಡಿಗ ಮಾಸ್ತೋ ನನಗಾಗಿ ಕಾಯುತ್ತಿದ್ದ. 'ನೀನು ಗಾಂಧಿಯನ್ನು ಎಷ್ಟೇ ವಿರೋಧಿಸಿ ಮಾತನಾಡಿದರೂ, ಮನಸ್ಸಿನ ಯಾವುದೋ ಮೂಲೆಯಲ್ಲಿ ಅವರ ಬಗ್ಗೆ ಗೌರವವಿದೆ ಎಂದು ನನಗೆ ಗೊತ್ತಿತ್ತು. ಅದಕ್ಕೇ ನಿಮ್ಮ ಊರಿನ ರೈಲು ನಿಲ್ಲುವ ಈ ಪ್ಲಾಟ್‌ಫಾರಂನಲ್ಲಿ ಕಾಯುತ್ತಿದ್ದೆ'ಎಂದ.

'ಮಾಸ್ತೋ ನೀನು ಇಷ್ಟು ದಿನ ಗಾಂಧಿಯ ವಿಚಾರಗಳ ಬಗ್ಗೆ ನನ್ನೊಂದಿಗೆ ಚರ್ಚಿಸುತ್ತಿದ್ದೆ, ಹಾಗಾಗಿ ನಾನೂ ವಿರೋಧಿಸುತ್ತಿದ್ದೆ. ವಿಚಾರಗಳನ್ನು ಬದಿಗಿರಿಸಿ ಆ ವ್ಯಕ್ತಿಯೊಂದಿಗಿನ ನನ್ನ ಅಂತರಂಗದ ಸಂಬಂಧದ ಬಗ್ಗೆ ನೀನು ಕೇಳಿದ್ದರೆ ಅದನ್ನು ಖಂಡಿತ ನನ್ನೊಡನೆ ಹಂಚಿಕೊಳ್ಳುತ್ತಿದ್ದೆ' ಎಂದು ಹೇಳಿದೆ.

ಬದುಕಿನ ಕುರಿತ ಗಾಂಧೀಜಿಯ ಪ್ರತಿಯೊಂದು ವಿಚಾರವನ್ನೂ ನಾನು

ಉಗ್ರವಾಗಿ ವಿರೋಧಿಸುತ್ತಿದ್ದೆನಾದರೂ ಹಲವು ಕಾರಣಗಳಿಗಾಗಿ ನಾನು ಅವರನ್ನು ಮೆಚ್ಚಿದ್ದೆ.

ಎಲ್ಲಕ್ಕಿಂತ ಮೊದಲಿಗೆ ಅವರ ಸತ್ಯನಿಷ್ಠೆ. ಯಾವ ವಿಷಯ ಸನ್ನಿವೇಶದಲ್ಲೂ ಅವರು ಸುಳ್ಳು ಹೇಳಲಿಲ್ಲ. ತಾವು ನಂಬಿದ ಸತ್ಯಕ್ಕೆ ಬದ್ಧರಾಗಿದ್ದರು. ಅವರು ಯಾವುದನ್ನು ಸತ್ಯ ಎಂದು ಭಾವಿಸಿದ್ದರೋ, ನನ್ನ ಪಾಲಿಗೆ ಅದು ಮೂರು ಕಾಸಿನ ಬೆಲೆಯದೂ ಅಲ್ಲ. ಆ ಮಾತು ಬೇರೆ, ಅದು ನನ್ನ ಸಮಸ್ಯೆಯೇ ವಿನಃ ಅವರದ್ದಲ್ಲ. ಆದರೆ ಅವರು ಸತ್ಯನಿಷ್ಠರಲ್ಲ ಎಂದು ಮಾತ್ರ ನಾನೆಂದಿಗೂ ಹೇಳಲಾರೆ.

ಎರಡನೆಯದಾಗಿ ಅವರ ಶುಚಿತ್ವ, ಸಂತರು ಲೌಕಿಕ ಶುಚಿತ್ವಕ್ಕೆ ಬೆಲೆ ಕೊಡುವುದಿಲ್ಲ ಎಂದು ಹೇಳುತ್ತಾರೆ. ಅಂಥವರ ನಡುವೆ ಇವರು ಒಳಗೂ ಹೊರಗೂ ತುಂಬ ಶುಚಿಯಾಗಿ ಬದುಕಿದ್ದರು.

ಮೂರನೇಯದಾಗಿ, ಅವರು ಎಲ್ಲ ಧರ್ಮಗಳನ್ನೂ ಸಮಾನವಾಗಿ ಗೌರವಿಸುತ್ತಿದ್ದರು. ಕೆಲವು ತಪ್ಪು ಕಾರಣಗಳಿಗಾಗಿ ಗೌರವಿಸುತ್ತದ್ದರು ಎಂಬುದು ನಿಜ. ಆ ಸಮನ್ವಯದ ಮಾತುಗಳಲ್ಲಿ ಇಡೀ ದೇಶ ಒಡೆದು ಚೂರಾಗಬಾರದು ಎಂಬ ಶಬ್ಧ ರಾಜಕೀಯ ಲೆಕ್ಕಾಚಾರವಿತ್ತು. ಆದ್ದರಂದಲೇ ಗಾಂಧಿಯ ರಾಜಕೀಯ ಪಕ್ಷಕ್ಕೆ ಇಡೀ ದೇಶವನ್ನು ಆಳಲು ಸಾಧ್ಯವಾದದ್ದು. ಅವರ ಪ್ರಾರ್ಥನಾ ಸಭೆಗಳಲ್ಲಿ ಗೀತೆ, ಬೈಬಲ್, ಕುರಾನ್, ಹೀಗೆ ಎಲ್ಲ ಧರ್ಮಗ್ರಂಥಗಳ ಆಯ್ದ ಭಾಗಗಳನ್ನು ಪಠಿಸಲಾಗುತ್ತಿತ್ತು. ಆ ಆಯ್ದ ಭಾಗಗಳನ್ನು ಒಮ್ಮೆ ಪರಿಶೀಲಿಸಿದಾಗ ನನಗೆ ಗಾಂಧಿಯ ಚಾಣಾಕ್ಷತನವನ್ನು ಕಂಡು ನಿಜಕ್ಕೂ ಆಶ್ಚರ್ಯವಾಯಿತು. ಎಲ್ಲ ಧರ್ಮಗ್ರಂಥಗಳಿಂದಲೂ ಗೀತೆಯ ವಿಚಾರಗಳಿಗೆ ಸಮ್ಮತಿಸುವ ಭಾಗಗಳನ್ನು ಮಾತ್ರ ಎಚ್ಚರಿಕೆಯಿಂದ ಆರಿಸಿಕೊಳ್ಳಲಾಗಿದ್ದು ಗೀತೆಯೊಂದಿಗೆ ಘರ್ಷಣೆಗಿಳಿಯಬಲ್ಲ ವಿಚಾರಗಳನ್ನು ವ್ಯವಸ್ಥಿತವಾಗಿ ಕೈಬಿಡಲಾಗಿತ್ತು. ಪ್ರಾರ್ಥನಾ ಸಭೆಗಳಲ್ಲಿ ಇತರ ಧರ್ಮಗ್ರಂಥಗಳನ್ನೂ ಅನುವಾದಿತ ರೂಪದಲ್ಲಿ ಪಠಿಸಲಾಗುತ್ತಿತ್ತೇ ವಿನಃ ಮೂಲಪಠ್ಯವನ್ನು ಅಲ್ಲಿ ಪರಿಗಣಿಸಲಿಲ್ಲ. ಬೇರೆಯವರ ಭಾವನೆಗಳಿಗೆ ಏಕೆ ಸುಮ್ಮನೆ ಹಾನಿ ಮಾಡಬೇಕು, ಅವರ ಧರ್ಮದಲ್ಲೂ ಸತ್ಯ ಇದ್ದರೂ ಇದ್ದೀತು ಎಂಬ ಲೆಕ್ಕಾಚಾರದಿಂದ ಆತ ಬೇರೆ ಧರ್ಮಗಳನ್ನು ಗೌರವಿಸುತ್ತಿದ್ದುದು. ಆದರೆ ಗೌರವಿಸುತ್ತಿದ್ದುದಂತೂ ಸುಳ್ಳಲ್ಲ.

ಇನ್ನು ನಾಲ್ಕನೆಯದಾಗಿ ಅವರ ಸರಳತೆ. ತನ್ನ ಬರವಣಿಗೆಯನ್ನು ಹೆಚ್ಚು ಹೆಚ್ಚು ಸರಳೀಕರಿಸಲು ಗಾಂಧಿಯಷ್ಟು ಶ್ರಮ ವಹಿಸಿದ ಬೇರೊಬ್ಬ ಲೇಖಕನನ್ನು ನಾನು ಕಂಡಿಲ್ಲ. ಒಂದು ವಾಕ್ಯವನ್ನು ಸೂಚ್ಯವಾಗಿಸಲು, ಸರಳವಾಗಿಸಲು

ಗಂಟೆ ಗಟ್ಟಲೆ ಕೂತು ಕಷ್ಟಪಡುತ್ತಿದ್ದರು. ತಾನು ನಂಬಿದ ಹಾಗೆ ಬದುಕಲು ಸಂಪೂರ್ಣವಾಗಿ ಪ್ರಯತ್ನಿಸಿದರು. ಅದನ್ನು ನಾನು ಮೆಚ್ಚುತ್ತೇನೆ. ಆದರೆ ತನ್ನ ನಂಬಿಕೆಗಳು ನಿಜವಾಗಿಯೂ ಕ್ಷುಲ್ಲಕ ನಂಬಿಕೆಗಳು ಎಂದು ಆತನಿಂದ ತಿಳಿದಿರಲಿಲ್ಲ. ಕೊನೆಗೆ ಅಂತಹ ಒಂದು ನಂಬಿಕೆಯೇ ಅವರ ಪ್ರಾಣವನ್ನೂ ಬಲಿತೆಗೆದುಕೊಂಡಿತು.

ಗಾಂಧಿಯ ಸಾವಿನಿಂದ ಭಾರತ ತನ್ನ ಚಾರಿತ್ರ್ಯವಧೆಯನ್ನೂ ಮಾಡಿಕೊಂಡಿತು. ಈ ಹಿಂದೆ ಗಾಂಧಿಯಂತಹ ಯಾವ ವ್ಯಕ್ತಿಯೂ ಭಾರತದಲ್ಲಿ ಹೀಗೆ ಹತ್ಯೆಯಾಗಿರಲಿಲ್ಲ. ಇದರರ್ಥ ಈ ದೇಶ ಶಾಂತಿಪ್ರಿಯ ದೇಶ ಎಂದಲ್ಲ. ಆದರೆ ಗಾಂಧಿಯಂತಹವರೂ ಕೊಲೆಗೆ ಯೋಗ್ಯರು ಎಂದು ಈ ದೇಶ ಈ ಹಿಂದೆ ಭಾವಿಸಿರಲಿಲ್ಲ. ನಾನು ಕಣ್ಣೀರಿಟ್ಟುದು ಗಾಂಧೀ ಸತ್ತರು ಎಂದಲ್ಲ, ಎಲ್ಲರೂ ಒಂದು ದಿನ ಸಾಯಬೇಕಲ್ಲವೇ? ಆಸ್ಪತ್ರೆಯ ಮಂಚದ ಮೇಲೆ ಸಾಯುವುದಕ್ಕಿಂತ ಆತ ಗುಂಡಿಗೆ ಬಲಿಯಾದದ್ದೇ ಸರಿ. ಇದರರ್ಥ ನಾನು ನಾಥೋರಾಂ ಗೋಡ್ಸೆಯನ್ನು ಬೆಂಬಲಿಸುತ್ತಿದ್ದೇನೆ ಎಂದಲ್ಲ. ನಿಸ್ಸಂಶಯವಾಗಿ ಅವನು ಒಬ್ಬ ಕೊಲೆಗಡುಕ ಅವನ ವಿಷಯದಲ್ಲಿ ನಾನು 'ಭಗವಂತ ಅವನನ್ನು ಕ್ಷಮಿಸು. ತಾನು ಏನು ಮಾಡುತ್ತಿದ್ದೇನೆ ಎಂದು ಅವನಿಗೆ ತಿಳಿಯುತ್ತಿಲ್ಲ' ಎಂದು ಯೇಸುವಿನಂತೆ ಪ್ರಾರ್ಥನೆ ಮಾಡಲಾರೆ. ತಾನೇನು ಮಾಡುತ್ತಿದ್ದೇನೆ ಎಂದು ಅವನಿಗೆ ಚೆನ್ನಾಗಿಯೇ ತಿಳಿದಿತ್ತು. ಹಾಗಾಗಿ ಅವನು ಶಿಕ್ಷಾರ್ಹ.

ನಾನು ಮತ್ತೆ ಊರಿಗೆ ಹಿಂದಿರುಗಿದ ಮೇಲೆ ಇದನ್ನೆಲ್ಲ ನನ್ನ ಅಪ್ಪನೊಂದಿಗೆ ಮಾತನಾಡಿದೆ. ಏಕೆಂದರೆ ನನ್ನ–ಗಾಂಧಿಯ ಸಂಬಂಧ ಅಷ್ಟು ಸರಳವಾದುದಲ್ಲ. ಅಪ್ಪನಿಗೆ ಇದನ್ನೆಲ್ಲ ಅರ್ಥ ಮಾಡಿಸಲು ತುಂಬಾ ವ್ಯವಧಾನ ಬೇಕಾಯಿತು. ಇದು ಬರೀ ಗಾಂಧೀಜಿಯವರ ವಿಷಯದಲ್ಲಿ ಮಾತ್ರವಲ್ಲ. ಎಲ್ಲ ಸಂಬಂಧಗಳ ವಿಷಯುದಲ್ಲೂ ನಾನು ಹೀಗೆಯೇ. ಯಾವ ಸಂಬಂಧ ಏರ್ಪಟ್ಟರೂ ಮರುಗಳಿಗೆಯೇ ನಾನು ಆ ಸಂಬಂಧಕ್ಕೆ ಅನ್ಯನಾಗಿಬಿಡುತ್ತೇನೆ. ಯಾರಲ್ಲಿ ಏನನ್ನೇ ಮೆಚ್ಚಿದರೂ ಮರುಗಳಿಯೇ ನನಗೆ ಹಿಡಸದ ವಿಷಯಗಳೂ ನನಗೆ ಗೋಚರವಾಗಿ ಬಿಡುವುವು. ಒಬ್ಬನನ್ನು ಎರಡು ಭಾಗಗಳಾಗಿ ಬೇರ್ಪಡಿಸಿ ಬಳಿಕ ಅವನ ಒಂದು ಭಾಗವನ್ನು ಸ್ವೀಕರಿಸುವುದು ಎಂದಿಗೂ ನನ್ನ ಜಾಯಮಾನವಲ್ಲ. ಆದ್ದರಿಂದಲೇ ನನ್ನ ವಿಚಾರಗಳು ಗಾಂಧೀವಿರೋಧೀ ಚಿಂತನೆಗಳೆಂದು ಕರೆಸಿಕೊಂಡಿತು, ನಾನು ಕೂಡ ಅವರ ವಿಚಾರಗಳನ್ನು ತೀವ್ರವಾಗಿ ಟೀಕಿಸುತ್ತ ಬಂದೆ. ಅವರ ವಿಚಾರಗಳಲ್ಲಿ ಸತ್ವವಿಲ್ಲ ಎಂಬ ಕಾರಣದಿಂದಲ್ಲ. ಅವರ ವಿಚಾರಗಳು ಹಲವು ತಲೆಮಾರುಗಳನ್ನು ಶಾಶ್ವತವಾಗಿ

ಮುಳುಗಿಸಿಬಿಡುವ ಸತ್ವವನ್ನು ಹೊಂದಿದ್ದವು.

ಒಂದು ವೇಳೆ – ಈ ಒಂದುವೇಳೆ ಎಂಬ ಮಾತು ತುಂಬ ಮುಖ್ಯ – ಸುಖ ಸಮೃದ್ಧಿ, ಸುಭಿಕ್ಷತೆ, ವಿಜ್ಞಾನ, ತಂತ್ರಜ್ಞಾನ ಇವುಗಳನ್ನು ಸ್ವಾಗತಿಸಿದ್ದರೆ ನಾನು ಅವರನ್ನು ಒಪ್ಪುತ್ತಿದ್ದೆ. ನಾನು ಯಾವುದನೆಲ್ಲ ಎತ್ತಿ ಹಿಡಿಯುವನೋ ಹೆಚ್ಚು ಕಡಿಮೆ ಅವೆಲ್ಲವನ್ನೂ ಗಾಂಧೀ ವಿರೋಧಿಸುತ್ತಿದ್ದರು. ನಾನು 'ಈಗಾಗಲೇ ಜನಸಂಖ್ಯೆ ಹೆಚ್ಚಿದೆ, ಕಾಮಸುಖಕ್ಕಾಗಿ ಬೇಕಾದರೆ ಸಂಭೋಗದಲ್ಲಿ ತೊಡಗಿ' ಎಂದರೆ ಅವರು 'ಸಂಭೋಗದಲ್ಲಿ ಸುಖ ಪಡಬಾರದು, ಮಕ್ಕಳನ್ನು ಹುಟ್ಟಿಸಲು ಮಾತ್ರ ಸಂಬೋಗಿಸಬೇಕು' ಎಂದು ಕರೆ ನೀಡುತ್ತಿದ್ದರು. ನಾನು ಬಡತನ ವಿರೋಧಿ ಆದರೆ ಆತನಿಗೆ ಅದೇ ಧರ್ಮವಾಗಿತ್ತು. ನಾನು ಬುಡಕಟ್ಟು ಜೀವನ ಪದ್ಧತಿಯ ವಿರೋಧಿ, ಆದರೆ ಅವರು ಭಾರತವನ್ನು ಆ ದಿಕ್ಕಿನಲ್ಲೇ ನಡೆಸಲು ಹೊರಟಿದ್ದರು. ಆದರೂ ನಾನು ಮೆಚ್ಚಿದೇ ಬಿಡುವವನಲ್ಲ.

ಗಾಂಧಿ ಮಹಾ ಸಂವೇದನಾಶೀಲ. ಒಂದು ಇಡೀ ಜನಾಂಗದ ನಾಡಿಮಿಡತವನ್ನು ಹಿಡಯಬಲ್ಲ ಸೂಕ್ಷ್ಮತೆ ಅವರಿಗಿತ್ತು. ಹತ್ತು ವರ್ಷದವನಿದ್ದಾಗ ನಾನು ಅವರನ್ನು ಭೇಟಿ ಮಾಡಿದ್ದು. ಈಗ ಮತ್ತೆ ನೋಡಬೇಕು ಎನಿಸುತ್ತಿದೆ. ಅಂದು ನನ್ನಿಂದ ಅವರಿಗೆ ಬರೀ ಮೂರು ಬೆಳ್ಳಿ ನಾಣ್ಯಗಳ ಸಂಪಾದನೆ ಆಗಿತ್ತು. ಈಗ ನಾನು ನಿಜವಾದ ಸಂಪತ್ತನ್ನು ಅವರಿಗೆ ನೀಡಬಲ್ಲೆ. ಆದರೆ ಅವರೇ ಇಲ್ಲ, ಇನ್ನು ಹಾಗೆ ನೀಡುವ ಅವಕಾಶವೂ ಮುಂದೆ ನನಗೆ ಕಾಣಿಸುತ್ತಿಲ್ಲ.

ಅನುವಾದ – ಡಾ.ಟಿ.ಎನ್.ವಾಸುದೇವಮೂರ್ತಿ

ಕರ್ಮಯೋಗದ ಮಹಿಮೆ

– ವಿನೋಬಾ

ಕರ್ಮಯೋಗಿಯ ಕರ್ಮದಿಂದ ಅವನ ಶರೀರಯಾತ್ರೆ ನಡೆದು, ದೇಹ–ಬುದ್ಧಿ ತೇಜೋವಂತವಾಗಿದ್ದೀತು. ಸಮಾಜದ ಕಲ್ಯಾಣವೂ ಆದೀತು. ಇವೆರಡೂ ಫಲಗಳಲ್ಲದೆ ಚಿತ್ತಶುದ್ಧಿಯ ಫಲವೂ ಅವನಿಗೆ ಸಿಗುತ್ತದೆ. 'ಕರ್ಮಣಾ ಶುದ್ಧಿಃ' ಎಂದು ಗೀತೆ ಹೇಳಿದೆ. ಕರ್ಮವು ಚಿತ್ತಶುದ್ಧಿಗೆ ಸಾಧನ. ನಮ್ಮ ನಿಮ್ಮ ಕರ್ಮವಲ್ಲ. ಕರ್ಮಯೋಗಿ ಮಾಡುವ ಮಂತ್ರವತ್ತಾದ ಕರ್ಮದಿಂದ ಅವನಿಗೆ ಚಿತ್ತಶುದ್ಧಿ ಲಭಿಸುತ್ತದೆ. ಮಹಾಭಾರತದಲ್ಲಿ ತುಲಾಧಾರ ವೈಶ್ಯನ ಕಥೆಯಿದೆ. ಜಾಝಾಲಿ ಎಂಬ ಬ್ರಾಹ್ಮಣ ತುಲಾಧಾರನ ಬಳಿಗೆ ಜ್ಞಾನ ಸಂಪಾದನೆಗಾಗಿ ಬರುತ್ತಾನೆ. ತುಲಾಧಾರ ಅವನಿಗೆ : 'ಅಯ್ಯ, ಈ ತಕ್ಕಡಿಯ ದಂಡಿಗೆ ಸರಳವಾಗಿರಬೇಕು.' ಈ ಬಾಹ್ಯಕರ್ಮ ಮಾಡುತ್ತ ತುಲಾಧಾರನ ಮನಸ್ಸೆ ಸರಳವಾಯಿತು. ಅಂಗಡಿಗೆ ದೊಡ್ಡವರೆ ಬರಲಿ, ಮಕ್ಕಳೆ ಬರಲಿ, ದಂಡಿಗೆ ಒಂದೇ ತೆರೆ; ಕೆಳಗೆ–ಮೇಲೆ ಇಲ್ಲವೇ ಇಲ್ಲ. ಉದ್ಯೋಗದಿಂದ ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ಕರ್ಮಯೋಗಿಯ ಕರ್ಮ ಒಂದು ಬಗೆಯ ಜಪ. ಆದ್ದರಿಂದ ಅವನಿಗೆ ಚಿತ್ತಶುದ್ಧಿ ಸಿಗುತ್ತದೆ. ನಿರ್ಮಲ ಚಿತ್ತದಲ್ಲಿ ಜ್ಞಾನದ ಪ್ರತಿಬಿಂಬ ಮೂಡುತ್ತದೆ. ತನ್ನ ತನ್ನ ಕರ್ಮದಲ್ಲೇ ಕರ್ಮಯೋಗಿಗೆ ಕಟ್ಟಕಡೆಗೆ ಜ್ಞಾನ ಲಭಿಸುತ್ತದೆ. ತಕ್ಕಡಿಯ ದಂಡಿಗೆಯಿಂದ ತುಲಾಧಾರನಿಗೆ ಸಮವೃತ್ತಿ ಸಿಕ್ಕಿತು. ಸೇನಾ ಎಂಬ ನಾಪಿತ ಪರರ ತಲೆಯ ಕೊಳವನ್ನು ತೆಗೆಯುತ್ತ ಸೇನೆಗೆ ಜ್ಞಾನ ಉದಯಿಸಿತು. 'ನಾನು ಇತರರ ತಲೆಯ ಕೊಳೆತೆಗೆಯುತ್ತಿದ್ದೇನೆ, ನನ್ನ ತಲೆಯ ನನ್ನ ಬುದ್ಧಿಯಲ್ಲಿರುವ ಕೊಳೆಯನ್ನು ತೆಗೆಯುತ್ತಿದ್ದೇನೆಯೇ?' ಇಂಥ ಆಧ್ಯಾತಮಿಕ ಭಾಷೆ ಅವನಿಗೆ ಆ ಕರ್ಮದಲ್ಲೆ ಸ್ಫುರಿಸಿತು. ಹೊದಲ್ಲಿ ಯಥೇಚ್ಛವಾಗಿ ಬೆಳೆದ ಕಳೆಯನ್ನು ತೆಗೆಯುತ್ತ ಹೃದಯದ ವಾಸನಾ ವಿಕಾರದ ಕಳೆಯನ್ನು ಕಿತ್ತೆಸೆಯುವ ಬುದ್ಧಿ ಕರ್ಮಯೋಗಿಗೆ ಬರುತ್ತದೆ. ಮಣ್ಣಿನಿಂದ ಸೊಗಸಾದ ಗಡಿಗೆ ಮಾಡುತ್ತಿದ ಗೋರ ಕುಂಬಾರ ತನ್ನ ಬದುಕನ್ನೇ ಒಂದು ಗಡಿಗೆ ಮಾಡಬೇಕೆಂದು ಲೆಕ್ಕಹಾಕುತ್ತಾನೆ. ಕೈಯಲ್ಲಿ ತಟ್ಟಗೋಲು ಹಿಡಿದು 'ಹಸೀ ಗಡಿಗೆಯೋ ಒಣ ಗಡಿಗೆಯೋ' ಎಂದು ಶರಣರನ್ನು ಪರೀಕ್ಷಿಸುವ ಪರೀಕ್ಷಕನಾಗುತ್ತಾನೆ. ಕರ್ಮಯೋಗಿಗಳಿಗೆ ಅವರವರ ಭಾಷೆಯಿಂದಲೇ ಭವ್ಯಜ್ಞಾನ ಸಿಕ್ಕಿತು. ಅವರ ಕರ್ಮಗಳೇ ಅವರ ಆಧ್ಯಾತ್ಮ ಶಾಲೆಗಳು. ಅವರ ಕರ್ಮಗಳು

ಉಪಾಸನಾಮಯವೂ. ಸೇವಾಮಯವೂ ಆಗುತ್ತವೆ. ಈ ಕರ್ಮ ನೋಡಲಿಕ್ಕೆ ವ್ಯವಹಾರಿಕ. ಒಳಗೊಳಗೆ ಆಧ್ಯಾತ್ಮಿಕ. ಕರ್ಮಯೋಗದಿಂದ ಮತ್ತೂ ಒಂದು ಉತ್ತಮ ಫಲವುಂಟು; ಸಮಾಜಕ್ಕೊಂದು ಆದರ್ಶ. ಸಮಾಜದಲ್ಲಿ ಮೊದಲ ಹೊಟ್ಟಿದ್ದು, ಆಮೇಲೆ ಹುಟ್ಟಿದ್ದು ಎಂಬ ಭೇದಭಾವವಿದ್ದೇ ಇದೆ. ಮೊದಲು ಹುಟ್ಟಿದವರು ಆಮೇಲೆ ಹುಟ್ಟಿದವರಿಗೆ ದಾರಿ ಹಾಕಿಕೊಡುತ್ತಾರೆ. ಹಿರಯರು ಕಿರಯರಿಗೆ, ತಾಯಿ ತಂದೆ ಮಕ್ಕಳಿಗೆ, ಗುರುಗಳು ಶಿಷ್ಯರಿಗೆ, ನಾಯಕರು ಬೆಂಬಲಿಗರಿಗೆ ಕೃತಿಯಿಂದ ಮೇಲ್ಪಂಕ್ತಿ ಹಾಕಬೇಕು. ಅಂಥ ಮೇಲ್ಪಂಕ್ತಿಯನ್ನು ಕರ್ಮಯೋಗಿಯಲ್ಲದೆ ಮತ್ತಾರು ಹಾಕಬಲ್ಲರು?

ಕರ್ಮಯೋಗಿಗೆ ಕರ್ಮದಲ್ಲೇ ಆನಂದ ಎಂತಲೇ ಅವನು ಸದಾ ಕರ್ಮ ನಿರತನಾಗಿರುತ್ತಾನೆ. ಆದ್ದರಿಂದ ಸಮಾಜದಲ್ಲಿ ದಂಭಾಚಾರ ಬೆಳೆಯದು. ಕರ್ಮಯೋಗಿ ಸ್ವಯಂ ತೃಪ್ತನಾದರೂ ಕರ್ಮಮಾಡದೆ ಇರಲಾರ. ತುಕರಾಮರು ಹೇಲುತ್ತಾರೆ: 'ಭಜನೆಯಿಂದ ದೇವರು ಸಿಕ್ಕಿದನೆಂದು ಭಜನೆಯನ್ನು ಬಿಟ್ಟುಬಿಡಲೆ? ಭಜನೆ ನಮ್ಮ ಸಹಜ ಧರ್ಮ.'

ಕರ್ಮದ ಮೆಟ್ಟಲೇರಿ ಶಿಖರ ಮುಟ್ಟಿದುದಾಯಿತು. ಕರ್ಮಯೋಗಿ ಶಿಖರವೇರಿದರೂ ಏಣಿಯನ್ನು ಬಿಡ. ಅವನಿಗೆ ಅದನ್ನು ಬಿಡಲು ಸಾಧ್ಯವೇ ಇಲ್ಲ. ಅವನ ಇಂದ್ರಿಯಗಳು ಸಹಜವಾಗಿಯೇ ತಮ್ಮ ಕರ್ಮದಲ್ಲಿ ತೊಡಗಿಕೊಳ್ಳುತ್ತವೆ, ಸ್ವಧರ್ಮ–ಕರ್ಮದ ಏಣಿಯ ಮಹತ್ವ ಸಮಾಜಕ್ಕೆ ರುಚಿಸುತ್ತದೆ.

ಸಮಾಜದಲ್ಲಿ ದಂಭಾಚಾರ ನಶಿಸುವುದು ಬಹಳ ದೊಡ್ಡ ಕೆಲಸ. ದಂಭದಿಂದ ಸಮಾಜ ಮುಳುಗುತ್ತದೆ. ಜ್ಞಾನಿಯೇ ಸುಮ್ಮನೆ ಇದ್ದರೆ ಉಳಿದವರೂ ಸುಮ್ಮನಿದ್ದಾರು. ಜ್ಞಾನಿ ನಿತ್ಯತೃಪ್ತ, ಅಂತಸ್ಸುಖಮಗ್ನ. ಆದ್ದರಿಂದ ಸುಮ್ಮನೆ ಇರಬಲ್ಲ. ಉಳಿದವರು ಮನಸ್ಸಿನೊಳಗೇ ಅಳುತ್ತ ಕರ್ಮ ಶೂನ್ಯರಾದಾರು. ಒಬ್ಬ ಅಂತಸ್ ತೃಪ್ತನಾಗಿ ಸುಮ್ಮನಿದ್ದಾನೆ; ಇನ್ನೊಬ್ಬ ಮನಸ್ಸಿನಲ್ಲಿ ತಳಮಳಿಸುತ್ತ ಸುಮ್ಮನಿರುವವನಂತೆ ನಟಿಸುತ್ತಾನೆ, ಎಂದರೆ ದಂಭಾಚಾರಿಯಾಗುತ್ತಾನೆ. ಎಂತಲೇ ಎಲ್ಲ ಸಾಧುಶರಣರೂ ಗೋಪುರವನ್ನು ಹತ್ತಿದ ಮೇಲೂ ಸಾಧನೆಯನ್ನು ಕೈಬಿಡಲಿಲ್ಲ; ತೀವ್ರವಾಗಿಯೆ ಸಾಧನಾ ನಿರತರಾಗಿದ್ದರು. ಸಾಯುವತನಕ ಧರ್ಮಾಚರಣೆಯಲ್ಲಿ ನಿರತರಾಗಿದ್ದರು. ಮಕ್ಕಳ ಗೊಂಬೆಯಾಟದಲ್ಲಿ ತಾಯಿ ಸವಿಗೊಳ್ಳುತ್ತಾಳೆ. ಇದೆಲ್ಲ ಹುಸಿಯೆಂದು ಅರಿತೂ ಆಕೆ ಮಕ್ಕಳಾಟದಲ್ಲಿ ಸವಿ ಹುಟ್ಟಿಸುತ್ತಾಳೆ. ತಾಯಿ ಆಟದಲ್ಲಿ ಸೇರದೆ ಮಕ್ಕಳಿಗೆ ಸವಿಯಿಲ್ಲ. ಕರ್ಮಯೋಗಿ ತೃಪ್ತನಾಗಿ ಕರ್ಮ ಬಿಟ್ಟರೆ ಉಳಿದವರು ಅತೃಪ್ತರಾಗಿಯೇ ಕರ್ಮ ಬಿಟ್ಟಾರು. ಮನಸ್ಸಿನಲ್ಲಿ ಆನಂದರಹಿತರೂ ನಿರಾಹಾರಿಗಳು ಆಗಿದ್ದಾರು.

ಅಂತೆ ಕರ್ಮಯೋಗಿ ಎಲ್ಲರಂತೆ ತಾನೂ ಕರ್ಮ ಮಾಡುತ್ತಿರುತ್ತಾನೆ. ತಾನು ಒಬ್ಬ ಹೆಚ್ಚುಗಾರ ಎಂದು ಅವನಿಗೆ ಅನಿಸದು.ಇತರರಿಗಿಂತ ಹೆಚ್ಚಾಗಿಯೇ ಹೊರಗಿನಿಂದ ದುಡಿಯುತ್ತಾನೆ. ಪರಮಾರ್ಥಿಕ ಕರ್ಮ ಎಂದು ಮುದ್ರೆ ಹೊತ್ತ ಕರ್ಮ ಯಾವುದೂ ಇಲ್ಲ.ಕರ್ಮಕ್ಕೆ ಯಾವ ಪ್ರಕಟಣೆಯೂ ಬೇಡ. ಉತ್ತಮ ಬ್ರಹ್ಮಚಾರಿಯಾದರೆ, ಇತರರಿಗಿಂತ ನಿನ್ನ ಕೃತಿಯಲ್ಲಿ ನೂರುಪಾಲು ಹೆಚ್ಚು ಉತ್ಸಾಹ ಕಾಣಬರಲಿ. ಆಹಾರ ಕಡಿಮೆ ಸಿಕ್ಕರೂ ಕೆಲಸ ಮುಪ್ಪಟ್ಟಾಗಲಿ. ಸಮಾಜ ಸೇವೆ ಹೆಚ್ಚು ಆಗಲಿ ನಿನ್ನಿಂದ. ನಿನ್ನ ಬ್ರಹ್ಮಚರ್ಯ ಕೃತಿಯಲ್ಲಿ ಕಾಣಲಿ. ಗಂಧದ ಸುಗಂಧ ಹೊರಗೆ ಹರಡಲಿ.

ಫಲತ್ಯಾಗ ಮಾಡಿದರೆ ಕರ್ಮಯೋಗಿಗೆ ಅನಂತಫಲ ಸಿಗುತ್ತದೆ. ಅವನ ಶರೀರಯಾತ್ರೆ ನಡೆದೀತು; ಮೈ ಮನಸ್ಸು ಸತೇಜವಾಗಿದ್ದಾವು; ಅವನಿರುವ ಸಮಾಜ ಸುಖೀಯಾದೀತು. ಅವನಿಗೆ ಚಿತ್ತಶುದ್ಧಿ ದೊರೆತು ಜ್ಞಾನವೂ ಲಭಿಸೀತು. ಸಮಾಜದ ದಂಭಾಚಾರ ನಶಿಸಿ ಜೀವನದ ಪವಿತ್ರ ಆದರ್ಶ ದೊರೆತೀತು. ಇದು ಕರ್ಮಯೋಗದ ಅನುಭವ ಸಿದ್ಧಿ ಮಹಿಮೆ.

ಉಳಿದವರಿಗಿಂತ ಕರ್ಮಯೋಗಿಯ ಕರ್ಮ ಉತ್ಕೃಷ್ಟವಾಗಿರುತ್ತದೆ. ಕರ್ಮವೇ ಉಪಾಸನೆ; ಕರ್ಮವೇ ಪೂಜೆ. ನಾನು ದೇವರ ಪೂಜೆ ಮಾಡಿದೆ, ನೈವೇದ್ಯವನ್ನೂ ಪ್ರಸಾದವನ್ನೂ ತೆಗೆದುಕೊಂಡೆ; ಆ ನೈವೇದ್ಯವೇ ಪೂಜೆಯ ಫಲವೆ? ನೈವೇದ್ಯಕ್ಕಾಗಿಯೇ ಪೂಜೆ ಮಾಡುವವನಿಗೆ ಒಡನೆಯೇ ಪ್ರಸಾದದ ಚೂರು ಸಿಗುತ್ತದೆ. ಕರ್ಮಯೋಗಿ ತಾ ಮಾಡಿದ ಪೂಜೆಗೆ ಪರಮೇಶ್ವರ ದರ್ಶನವನ್ನೇ ಫಲವಾಗಿ ಬೇಡುತ್ತಾನೆ. ಘನ್ನಲಿಕ್ಕೆ ಪ್ರಸಾದ ಬೇಕು ಎಂದು ಕ್ಷುದ್ರ ಲಾಭದ ಮಾತೇ ಅವನಿಗೆ ಹೊಳೆಯದು. ತನ್ನ ಕರ್ಮದ ಬೆಲೆಯನ್ನು ತಗ್ಗಿಸಲು ಅವನು ಸಿದ್ಧನಿಲ್ಲ. ಸ್ಥೂಲ ಪ್ರಮಾಣದಿಂದ ತನ್ನ ಕರ್ಮವನ್ನು ಅಳೆಯ. ಸ್ಥೂಲ ದೃಷ್ಟಿಯವರಿಗೆ ಸ್ಥೂಲಫಲ. ಹಳ್ಳಿಗರಲ್ಲಿ ಒಂದು ಗಾದೆಯಿದೆ, – ಆಳವಾಗಿ ಬಿತ್ತು, ತೇವವಾಗಿ ಬಿತ್ತು. ತೇವವಿಲ್ಲದೆ ಎಷ್ಟು ಆಳ ಬಿತ್ತಿದರೇನು? ಆಳವೂ ಬೇಕು, ತೇವವೂ ಬೇಕು. ಎರಡೂ ಇದ್ದರೆ ತೆನೆ ಮುಂಗೈಯ ದಪ್ಪವಾದೀತು. ಕರ್ಮ ಆಳವಾಗಬೇಕು. ಎಂದರೆ ಉತ್ಕೃಷ್ಟವಾಗಬೇಕು, ಅದಕ್ಕೆ ಈಶ್ವರ ಭಕ್ತಿ, ಈಶ್ವರಾರ್ಪಣೆಯ ತೇವವೂ ಬೇಕು. ಕರ್ಮಯೋಗಿ ಆಳವಾದ ಕರ್ಮಮಾಡಿ ಅದನ್ನೆಲ್ಲಾ ಈಶ್ವರಾರ್ಪಣೆ ಮಾಡುತ್ತಾನೆ.

ನಮ್ಮಲ್ಲಿ ಪರಮಾರ್ಥದ ಬಗ್ಗೆ ಹುಚ್ಚು ಭಾವನೆ ಹರಡಿವೆ. ಪರಮಾರ್ಥ ಸಾಧಕ ಕೈಕಾಲು ಆಡಿಸಬಾರದು, ಏನೂ ಕೆಲಸ ಮಾಡಬಾರದು ಎಂದು ಲೋಕ ತಿಳಿಯುತ್ತದೆ. ನೂಲು ತೆಗೆವವನು, ಬಟ್ಟೆ ನೇಯುವವನು, ಹೊಲ

ಉಳುವವನು ಎಂಥ ಪರಮಾರ್ಥಿ ಎಂದು ಕೇಳುತ್ತದೆ. ಊಟ ಮಾಡುವವನು ಹೇಗೆ ಪರಮಾರ್ಥಿ ಎಂದು ಮಾತ್ರ ಯಾವಾಗಲೂ ಕೇಳದು. ಕರ್ಮಯೋಗಿಯ ದೇವರೇನೋ ಮೈ ತಿಕ್ಕುತ್ತ ನಿಂತಿದ್ದಾನೆ. ರಾಜಸೂಯ ಯಾಗದಲ್ಲಿ ಕೈಯಲ್ಲಿ ಸಗನಿ ಹಿಡಿದು ಎಂಜಲು ಬಳಿದಿದ್ದಾನೆ, ಕಾಡಿನಲ್ಲಿ ದನಗಳನ್ನು ಮೇಯಿಸುತ್ತಾನೆ. ದ್ವಾರಕೆಯ ದೊರೆಯಾಧರೂ ಗೋಕುಲಕ್ಕೆ ಹೋದರೆ ಕೊಳಲನ್ನೂ ದತ್ತು ದನಗಳನ್ನು ಮೇಯಿಸುತ್ತಾನೆ. ಹೀಗೆ ಕುದುರೆ ತಿಕ್ಕುವ, ದನಕಾಯುವ, ರಥ ಹೊಡೆಯುವ, ಸಗಣಿ ಬಳಿಯುವ, ಕರ್ಮಯೋಗಿ ಪರಮೇಶ್ವರನನ್ನು ಶರಣರು ತಂದು ನಿಲ್ಲಿಸಿದ್ದಾರೆ. ಶರಣರೂ ಅಷ್ಟೆ– ಒಬ್ಬ ದರ್ಜಿ, ಒಬ್ಬ ಕುಂಬಾರ, ಒಬ್ಬ ನೇಕಾರ, ಮಾಲಿ, ಬೀಸುವವ, ತಕ್ಕಡಿ ಹಿಡಿದವ ಒಬ್ಬ, ಕ್ಷೌರ ಮಾಡುವವ, ಸತ್ತ ಪ್ರಾಣಿಗಳನ್ನು ಹೊರುವವ – ಹೀಗೆ ಕೆಲಸ ಮಾಡುತ್ತ ಮಾಡುತ್ತ ಮುಕ್ತರಾಗಿದ್ದಾರೆ.

ಇಂಥ ದಿವ್ಯ ಕರ್ಮಯೋಗದ ವ್ರತದಿಂದ ಎರಡು ಕಾರಣಗಳಿಗೆ ಮನುಷ್ಯ ಹೀಂಜರಿಯುತ್ತಾನೆ. ಇಂದ್ರಿಯಗಳ ವಿಶಿಷ್ಟ ಸ್ವಭಾವ ಲಕ್ಷ್ಯದಲ್ಲಿರಬೇಕು. ಇದು ಬೇಕು ಅದು ಬೇಡ ಎಂಬ ದ್ವಂದ್ವ ಇಂದ್ರಿಯಗಳನ್ನು ಸುತ್ತುವರೆದಿದೆ. ಯಾವುದು ಬೇಕೋ ಅದರಲ್ಲಿ ರಾಗ ಅಥವಾ ಪ್ರೀತಿ; ಯಾವುದು ಬೇಡವೋ ಅದರಲ್ಲಿ ದ್ವೇಷ. ಈ ರಾಗದ್ವೇಷ ಮನುಷ್ಯನನ್ನು ಹರಿದು ತಿನ್ನುತ್ತದೆ. ಕರ್ಮಯೋಗ ಎಷ್ಟು ಅನಂತಫಲಪ್ರದಾಯಿ! ಆದರೆ ಈ ಕಾಮಕ್ರೋಧ ನಮ್ಮನ್ನು 'ಇದು ಹಿಡಿ, ಅದು ಬಿಡಿ' ಎಂಬ ಗೊಂದಲದಲ್ಲೆ ಸಿಗಿಸಿ ಹಗಲಿರುಳು ಬೆನ್ನು ಹತ್ತುತ್ತದೆ. ಇದರ ಸಹವಾಸವನ್ನೆ ಬಿಡು ಎಂದು ಭಗವಂತ ಈ ಅಧ್ಯಯದ ಕೊನೆಯಲ್ಲಿ ಎಚ್ಚರಿಕೆ ಕೊಡುತ್ತಾನೆ. ಸ್ಥಿತಪ್ರಜ್ಞನು ಸಂಯಮಮೂರ್ತಿ ಹೇಗೋ ಹಾಗೆ ಕರ್ಮಯೋಗಿಯೂ ಆಗಬೇಕು. ●

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟಿನಲ್ಲಿಯ ಎಲ್ಲರಿಗೆ ಅಮ್ಮನಾಗಿದ್ದ ಗಿರಿಜಾ ಕೌಲಗಿ ತೀರಿಕೊಂಡು ಮೂರು ತಿಂಗಳುಗಳೇ ಆದವು. ಕಾಲ ಗತಿಸಿದಂತೆ ಅವರ ನೆನಪು ಇನ್ನೂ ಗಟ್ಟಿಯಾಗುತ್ತಾ ಹೋಗುತ್ತಿದೆ. ಇದಕ್ಕೆ ಕಾರಣ ಟ್ರಸ್ಟಿನಲ್ಲಿ ಹಾಗೂ ಕುಟುಂಬದಲ್ಲಿ ಆಗುತ್ತಿರುವ ಸದಾಶಯದ ಬೆಳವಣಿಗೆಯನ್ನು ನೋಡಲು ಅವರಿಲ್ಲವಲ್ಲ ಎಂಬುದಕ್ಕೆ. ಅವರಿದ್ದು ಎಲ್ಲ ಬೆಳವಣಿಗೆಗಳನ್ನು ನೋಡುವಂತಾಗಿದ್ದರೆ ಎಲ್ಲರಿಗೂ ಎಷ್ಟೊಂದು ಸಂತೋಷವಿರುತ್ತಿತ್ತು. ಎಂಬುದು ಕೂಡ.

ಅಮ್ಮನ ಸಂಪರ್ಕಕ್ಕೆ ಬಂದಿರುವ ತಮಿಳುನಾಡಿನ ಸ್ವಯಂ ಸೇವಕಿ ಲಕ್ಷ್ಮಿ ಎಂಬುವವರು ಅಮ್ಮನ ಬಗ್ಗೆ ಬರೆದ ಕವನ ಇಂಗ್ಲೀಷ್‌ನಲ್ಲಿದೆ.

AJJI....

When the empty land called out
And the trees stood still...
There arose a kind soul

A strong one!
With the kindest heart
Like the banyan tree
So strong to the roots...
Providing shade for anyone under it.

The soul came...
Just to teach the world
How someone could be loved so much...

For making money is simple
But maintaining relationship is commendable.
And this soul
From a place called Melukote
is like a breeze
Moving through us...
And morning us
Every day!

- Lakshmi

ಟ್ರಸ್ಟಿನ ಹೊಸ ಜೀವನದಾರಿ ಕೇಂದ್ರದಲ್ಲಿ ನಡೆಯುವ ಕಾಲೇಜ್ ವಿದ್ಯಾರ್ಥಿಗಳ ಶಿಬಿರದಲ್ಲಿ ಪಾಲ್ಗೊಂಡಿದ್ದ ಓರ್ವ ವಿದ್ಯಾರ್ಥಿನಿಯೊಬ್ಬಳು ಶಿಬಿರದ ನಂತರ ಬರೆದ ಕವನ.

ಹೊಸ ಜೀವನದೆಡೆಗೆ

ಪರಿಸರದ ಶಿಬಿರ
ಇಲ್ಲಿ ಇದ್ದಷ್ಟು ನನಗೆ ಸಡಗರ
ಸ್ವಾರ್ಥಭಾವನೆಗಳಿಲ್ಲದ ಆ
ಪ್ರಾಣಿ– ಪಕ್ಷಿಗಳೆಲ್ಲಿ?
ಕೇವಲ ಪರಮ ಸ್ವಾರ್ಥವೇ
ತುಂಬಿರುವ
ಈ ನಮ್ಮ ಮಾನವ ಕುಲವೆಲ್ಲಿ?
ಪರಿಸರಕ್ಕಿಂತ ಆತ್ಮೀಯ
ಮಿತ್ರನಾರು?
ಪರಿಸರಕ್ಕಿಂತ ಒಳ್ಳೇಯ ಗುರು
ಯಾರು?

ತಂಗಾಳಿಯ ಶಬ್ಧ ಸುಯ್ಯೆಂದು
ಕೇಳುತ್ತಿದೆ
ಹಕ್ಕಿಗಳ ಕುಹೂಕುಹೂ ಕಲರವ
ಕೇಳಿ ಬರುತ್ತಿದೆ.
ಪರಿಸರದ ಮಧ್ಯೆ;
ಮನಸ್ಸಲ್ಲಿ ಮೂಡಿರುವ ಮುಸ್ಸಂಜೆ
ಮಾತು ಹಿತಕರವಾಗಿದೆ

ಮಾತು ಹಾಡಾಗಲು ರಕ್ಕೆ
ಕಟ್ಟಿಕೊಂಡು ಹಾರಬಯಸಿದೆ.

ಸ್ವಚ್ಛಂದವಾಗಿ ಹಾರುತ
ಪರಿಸರದ ಬಗ್ಗೆ ಅರಿವು
ಮೂಡಿಸಬೇಕಾಗಿದೆ,
'ಕಾಡು ಬೆಳೆಸಿ, ನಾಡು ಉಳಿಸಿ'
ಎಂಬುದನ್ನು ಗಟ್ಟಿಯಾಗಿ
ಸಾರಬೇಕಿದೆ.
ಎಲ್ಲರ ಇದನ್ನು ಅರಿತು
ನಡೆಯಬೇಕಿದೆ.
ಹಸಿರನ್ನು ಉಳಿಸಿ, ಬೆಳೆಸುತ್ತಾ
ನಮ್ಮ ಜೀವನವನ್ನು
ಹಸನ್ಮುಖಿಯಾಗಿ ಸಾಗಿಸುತ್ತಾ
ಸಸಿ ಬೆಳೆದು ಮರವಾಗುವಂತೆ
ನಾವೆಲ್ಲರು ಬಾಳಬೇಕಿದೆ.
ಪರಿಸರದ ಬಗೆಗಿನ ನನ್ನ ಮನಸ್ಸಿನ
ಮಾತು ಕವನವಾಗಿದೆ.

ತನುಶ್ರೀ ಟಿ.
ಪ್ರಥಮ B com
ನಾಗಾರ್ಜುನ,ಕಾಲೇಜ್,ಬೆಂಗಳೂರು.

✦ ತನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಒಂದು ವರ್ಷ ಬಿಡುವು ತೆಗೆದುಕೊಂಡು ಕೆಲಸ ಕಾರ್ಯ ಮಾಡುತ್ತಾ ಜೀವನಾನುಭವ ಪಡೆಯಲು ಸ್ವಯಂ ಸೇವಕಿಯಾಗಿ ಚೈತ್ರ ಎಂಬ ಯುವತಿ ಟ್ರಸ್ಟಿನಲ್ಲಿ ಕೆಲಸ ಮಾಡುತ್ತಿದ್ದಾಳೆ. ಅವಳಿಗೆ ಕಸೂತಿ ಕಲೆ ಗೊತ್ತಿರುವುದರಿಂದ ಟ್ರಸ್ಟಿನಲ್ಲಿ ಸಿದ್ಧವಾಗುತ್ತಿರುವ ಖಾದಿ ಉಡುಪುಗಳ ಮೇಲೆ ಸೂಕ್ತ ಕಸೂತಿ ಹಾಕಿ ಅವುಗಳ ಮೌಲ್ಯ ಹೆಚ್ಚುವಂತೆ ಮಾಡುತ್ತಿದ್ದಾಳೆ. ಆ ರೀತಿ ತಯಾರಿಸಿದ ಉಡುಪುಗಳು ಇತ್ತೀಚೆಗೆ ಚನ್ನೈನಲ್ಲಿ ನಡೆದ ಪ್ರದರ್ಶನದಲ್ಲಿ ತಕ್ಷಣ ಮಾರಾಟವಾದವು.

ಈ ಕೆಲಸದೊಂದಿಗೆ ದತ್ತು ಕೇಂದ್ರದ ಮಕ್ಕಳ ಮೇಲ್ವಿಚಾರಣೆಯನ್ನು ಸಹ ಮಾಡುತ್ತಿದ್ದಾಳೆ.

- ✦ ವಿನ್ಯಾಸಕಾರ್ತಿ ಗೀತಾ ಪಾಟಿಲ್ ಎಂಬುವವರು ಖಾದಿ ಉತ್ಪಾದನಾ ಕೇಂದ್ರಕ್ಕೆ ಭೇಟಿಕೊಟ್ಟು ಸೂಕ್ತ ಸಲಹೆ ಕೊಟ್ಟರು.
- ✦ ಕಲ್ಕತ್ತಾದಲ್ಲಿ ನಡೆದ ಪ್ರದರ್ಶನದಲ್ಲಿ ಟ್ರಸ್ಟಿನ ಖಾದಿ ಮಾರಾಟ ಮಾಡಲು ಸ್ವಯಂ ಸೇವಕರಾದ ರಘು ಮತ್ತು ಸುಹಾಸಿನಿ ಅಲ್ಲಿಗೆ ಹೋಗಿದ್ದರು.
- ✦ ಬೆಂಗಳುರಿನಲ್ಲಿರುವ ಸರಕಾರಿ ಹೋಮಿಯೋಪತಿ ಕಾಲೇಜಿನ ಹತ್ತು ವಿದ್ಯಾರ್ಥಿನಿಯರು ಟ್ರಸ್ಟಿಗೆ ಭೇಟಿಕೊಟ್ಟರು. ಅವರಲ್ಲಿ ಓರ್ವ ವಿದ್ಯಾರ್ಥಿನಿ ಉಕ್ರೇನ್‌ನಲ್ಲಿ ಓದುತ್ತಿದ್ದಾಳೆ.
- ✦ ದತ್ತು ತೆಗೆದುಕೊಂಡಿದ್ದ ಮಗುವಿನ ತಾತ ಜಾರ್ಜ್, ಅಜ್ಜಿ ಮೀರಾ ಎಂಬುವವರು ಟ್ರಸ್ಟಿಗೆ ಭೇಟಿಕೊಟ್ಟರು ಮತ್ತು ದತ್ತು ಕೇಂದ್ರಕ್ಕೆ ಆಧುನಿಕವಾದ ತೊಟ್ಟಿಲು ಇತ್ಯಾದಿ ದಾನವಾಗಿ ಕೊಟ್ಟರು.
- ✦ ಸುಮನಸ್ ಕೌಲಗಿ ಪಿ.ಎಚ್.ಡಿ ಮಾಡಲು ಇಂಗ್ಲೇಂಡಿಗೆ ಹೋಗುವ ಮುನ್ನ ಕೆಲವು ಆತ್ಮೀಯರು ಮೈಸೂರು ಸಭೆ ಸೇರಿ ಶುಭಾಷಯ ಕೋರಿದರು. ಸೆಪ್ಟಂಬರ್ ೯ರಂದು ಸುಮನಸ್ ಇಂಗ್ಲೇಂಡಿಗೆ ಹೋದರು.
- ✦ ಕಾವೇರಿ ನೀರಿನ ವಿವಾದಕ್ಕೆ ಸಂಬಂಧಿಸಿದ ಸಂವಾದ ಕಾರ್ಯಕ್ರಮದಲ್ಲಿ ಸುರೇಂದ್ರ ಕೌಲಗಿಯವರು ಭಾಗವಹಿಸಿದರು. ಜಲತಜ್ಞ ರಾಜೇಂದ್ರ ಸಿಂಗ್ ಮತ್ತು ಇನ್ನೂ ಅನೇಕ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.

ಸರ್ವೋದಯ ಆಂದೋಲನ ಮುನ್ನಡೆ

ಶಾಂತಿ ಮತ್ತು ಸದ್ಭಾವನ ಸೈಕಲ್ ಯಾತ್ರೆ

ಅಖಿಲ ಭಾರತ ಸರ್ವೋದಯ ಮಂಡಲ ಗಾಂಧೀ ಪ್ರತಿಷ್ಠಾನ ಮತ್ತು ಇತರ ಸಮಾನ ವೈಚಾರಿಕ ಸಂಘಟನೆಗಳೆಲ್ಲ ಸೇರಿ ೩ ಸೆಪ್ಟಂಬರ್‌ನಿಂದ ೩ ನವೆಂಬರ್ ವರೆಗೆ ಒಟ್ಟು ೬೦ ದಿನಗಳ ಸೈಕಲ್ ಯಾತ್ರೆ ಏರ್ಪಡಿಸಲಾಗಿದೆ. ಇದು ಅಸ್ಸಾಂ ರಾಜ್ಯದ ಕೋಕರಝರ್ ಜಿಲ್ಲೆಯಿಂದ ಜಮ್ಮು-ಕಾಶ್ಮೀರದವರೆಗೆ ಈ ಯಾತ್ರೆ ನೆಡೆಸುವುದು ದೇಶದ ವಿವಿಧ ರಾಜ್ಯಗಳ ಯುವಕರು ಈ ಯಾತ್ರೆಯಲ್ಲಿ ಭಾಗವಹಿಸಿದ್ದರು. ಆಗಸ್ಟ ಮಾಹೆಯಲ್ಲಿ ಈ ಪ್ರದೇಶದಲ್ಲಿ ಗಲಭೆ ಉಂಟಾಗಿತ್ತು. ಅನೇಕ ಸಾವು-ನೋವುಗಳು ಆಗಿದ್ದವು. ಆದ್ದರಿಂದ ಈ ಶಾಂತಿಯಾತ್ರೆಯನ್ನು ಆಯೋಜಿಸಲಾಗಿದೆ. ಇದರಲ್ಲಿ ವಿವಿಧ ಧರ್ಮಗಳ ಸಂಪ್ರದಾಯಗಳ ಜಾತಿಯ ೨೫ ಯುವಕ ಯುವತಿಯರು ಸೈಕಲ್ ಯಾತ್ರೆ ಮಾಡಿ ಜನಸಮೂಹದಲ್ಲಿ ಶಾಂತಿ ಮತ್ತು ಸೌಹಾರ್ದತೆಯ ಸಂದೇಶ ಬಿತ್ತವರು. ಯಾತ್ರೆಯು ಅಸ್ಸಾಂ, ಬಂಗಾಲ, ಬಿಹಾರ, ಉತ್ತರ ಪ್ರದೇಶ, ದಿಲ್ಲಿ, ಹರಿಯಾಣ, ಪಂಜಾಬ್, ಮತ್ತು ಜಮ್ಮು ಕಾಶ್ಮೀರ ಪ್ರದೇಶದಲ್ಲಿ ಸುತ್ತಾಡುವುದು. ಈ ಯಾತ್ರೆಯ ಮೇಲ್ವಿಚಾರಣೆಯನ್ನು ಚಂದನ್‌ಪಾಲ್ ಮಾಡುವರು. ಅವರ ಮೊಬೈಲ್ ಸಂಖ್ಯೆ: ೯೪೩೩೦೨೨೦೭೦.

* * *

ದಲಿತ ಅತ್ಯಾಚಾರದ ವಿರೋಧದಲ್ಲಿ ಪಾದಯಾತ್ರೆ ಮತ್ತು ಸತ್ಯಾಗ್ರಹ

ಗುಜುರಾತ್ ರಾಜ್ಯದ ಉನ ಎಂಬಲ್ಲಿ ದಲಿತರ ಮೇಲೆ ಆಗಿದ್ದ ಅತ್ಯಾಚಾರದ ವಿರಧ್ಧ ಮತ್ತು ಪೀಡಿತರಾದ ಜನರ ಬಗ್ಗೆ ಸಂವೇದನೆ ವ್ಯಕ್ತ ಮಾಡಲು ಸರ್ವೋದಯ ಕಾರ್ಯಕರ್ತರು ಆಗಸ್ಟ ಕ್ರಾಂತಿ ದಿನವಾದ ೯ನೇ ಆಗಸ್ಟ್ರಂದು ಉನಕ್ಕೆ ಹೋಗಿ ಅಲ್ಲಿ ಸತ್ಯಾಗ್ರಹ ಮಾಡಿದರು. ಅವರು ೧೨ ಕಿ.ಮೀ ದೂರದ ಪಾದಯಾತ್ರೆ ಮಾಡಿದರು. ಈ ಕಾರ್ಯಕ್ರಮದ ನೇತೃತ್ವವನ್ನು ಸೇವಾಗ್ರಾಮ ಆಶ್ರಮ ಪ್ರತಿಷ್ಠಾನದ ಅಧ್ಯಕ್ಷರಾದ ಜಯವಂತ್ ಮಠಕರ ಅವರು ವಹಿಸಿದ್ದರು. ಕಷ್ಟದಲ್ಲಿರುವ ದಲಿತ ಪರಿವಾರದವರು ಇಷ್ಟಪಟ್ಟಲ್ಲಿ ಅವರಿಗೆ ಸೇವಾಗ್ರಾಮ ಆಶ್ರಮದಲ್ಲಿ ಇರಲು ಮತ್ತು ಕೃಷಿ ಮಾಡುವುದಕ್ಕೆ ಭೂಮಿ ಹಾಗೂ ಮಕ್ಕಳಿಗೆ ನಿಹಿಶುಲ್ಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಹೇಳಿದರು. ವಿವಿಧ ಸಂಘಟನೆಗಳು ಸೇರಿ ಒಟ್ಟು ೫೦ ಸಾವಿರ ರುಪಾಯಿಗಳನ್ನು ಕಷ್ಟದಲ್ಲಿದ್ದ ದಲಿತರಿಗೆ ಸಹಾಯ ಧನವಾಗಿ ಕೊಟ್ಟರು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರೀಸಿದ ಚಂದಾದಾರರು

ಶ್ರೀ ಜಿ ವಿ ಸಂಪತ್ಕುಮಾರನ್	– ಮೈಸೂರು
ಶ್ರೀ ಗುರುರಾಜು ಹಬ್ಬು	– ಜಮಖಂಡಿ
ಶ್ರೀ ತಮ್ಮಣ್ಣ ಬುದನಿ	– ಮುಧೋಳ
ಡಾ॥ ಚಿಕ್ಕಮರಳಿ ಬೊರೇಗೌಡ	– ಪಾಂಡವಪುರ
ಶ್ರೀ ಎಚ್ ಎಲ್ ಎನ್ ಶಾಸ್ತ್ರಿ	– ಮೈಸೂರು
ಶ್ರೀ ವಿಶ್ವನಾಥ್ ಕಾಮತ್	– ಮಂಗಳೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237